| | | | |
|---|---|---|---|
| 1. | ಹೆಸರು | : | ಡಾ. ಕೆ.ಮೋಹನ್‌ಕೃಷ್ಣ ರೈ |
| 2. | ಜನ್ಮ ದಿನಾಂಕ | : | 27.04.1969 |
| 3. | ವಿದ್ಯಾರ್ಹತೆ | : | ಎಂ.ಎ., ಪಿಎಚ್.ಡಿ. |
| 4. | ವಿಳಾಸ | : | ಪ್ರಾಧ್ಯಾಪಕ<br>ಚರಿತ್ರೆ ವಿಭಾಗ<br>ಕನ್ನಡ ವಿಶ್ವವಿದ್ಯಾಲಯ, ಹಂಪಿ<br>ವಿದ್ಯಾರಣ್ಯ – 583 276 |
| 5. | ಸ್ಥಿರ ದೂರವಾಣಿ ಸಂಖ್ಯೆ | : | 08394 241337 |
| 6. | ಮೊಬೈಲ್ ಸಂಖ್ಯೆ | : | 9449980976 |
| 7. | ಫ್ಯಾಕ್ಸ್ ಸಂಖ್ಯೆ | : | 08394 241334 |
| 8. | ಇ–ಮೇಲ್ ವಿಳಾಸ | : | mkrai 1969@rediffmail.com |
| 9. | ಕಾರ್ಯನಿರ್ವಹಿಸುತ್ತಿರುವ ವಿಭಾಗ | : | ಚರಿತ್ರೆ |
| 10. | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ | : | ಪ್ರಾಧ್ಯಾಪಕ |

11. ವಿಷಯ ತಜ್ಞತೆ
1. ಮಧ್ಯಕಾಲೀನ ಹಾಗೂ ಆಧುನಿಕ ಭಾರತದ ಚರಿತ್ರೆ
2. ಆಧುನಿಕ ಯುರೋಪಿನ ಚರಿತ್ರೆ
3. ಭಾರತದ ನಗರ ಚರಿತ್ರೆ

12. ಅಧ್ಯಯನ ನಡೆಸುತ್ತಿರುವ ಆಸಕ್ತಿಯ ಕ್ಷೇತ್ರಗಳು
1. ನಗರ ಚರಿತ್ರೆ 2. ಪರಿಸರ ಚರಿತ್ರೆ
3. ಸಂಸ್ಕೃತಿ ಚರಿತ್ರೆ 4. ಸಬಾಲ್ಟರ್ನ್ ಚರಿತ್ರೆ

## 13. ಯೋಜನೆಗಳ ವಿವರ.

## ಅ. ಪೂರ್ಣಗೊಳಿಸಿದ ಸಾಂಸ್ಥಿಕ ಯೋಜನೆಗಳು

### 1. ಚರಿತ್ರೆ ವಿಶ್ವಕೋಶ (1996–2001)

ಜಾಗತಿಕ ಚರಿತ್ರೆಯ ವಿವಿಧ ಆಯಾಮಗಳನ್ನು ಈ ಯೋಜನೆಗಳಲ್ಲಿ ಚರ್ಚಿಸಲಾಗಿದೆ. ಚರಿತ್ರೆ ರಚನಾಶಾಸ್ತ್ರ ಸಿದ್ಧಾಂತ ಮತ್ತು ಅಧ್ಯಯನ ವಿಧಾನದ ಹೊಸ ಆಯಾಮಗಳು, ಭೂಮಿಯ ಚರಿತ್ರೆ, ಏಷ್ಯಾ, ಆಫ್ರಿಕಾ, ಯುರೋಪ್. ಅಮೆರಿಕಾ, ಆಸ್ಟ್ರೇಲಿಯಾ, ಶಾಂತಮಹಾಸಾಗರದ ದ್ವೀಪಗಳು–ಒಸೆನಿಯಾ, ಭಾರತ ಉಪಖಂಡ ಹಾಗೂ ಕರ್ನಾಟಕ ಎನ್ನುವ ಒಂಭತ್ತು ಭಾಗಗಳಲ್ಲಿ ಚರಿತ್ರೆಯ ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಸಂದರ್ಭಗಳನ್ನು ವಿಶ್ಲೇಷಿಸಲಾಗಿದೆ.

### 2. ಏಕೀಕರಣೋತ್ತರ ಕರ್ನಾಟಕದ ಪರಿಸರ ಚಳವಳಿಗಳು (1998–99)

ಈ ಯೋಜನೆಯಲ್ಲಿ ಏಕೀಕರಣೋತ್ತರ ಕರ್ನಾಟಕದಲ್ಲಿ ನಡೆದ ಪ್ರಮುಖ ಪರಿಸರ ಚಳವಳಿಗಳ ಅಧ್ಯಯನ ನಡೆಸಲಾಗಿದೆ. ಇದನ್ನು ಪರಿಸರ ಚಳವಳಿ:ಹಿನ್ನೆಲೆ, ಸ್ವರೂಪ ಮತ್ತು ಸೈದ್ಧಾಂತಿಕ ನೆಲೆಗಳು ಹಾಗೂ ಪ್ರಮುಖ ಪರಿಸರ ಚಳವಳಿಗಳು ಎನ್ನುವ ಎರಡು ಭಾಗಗಳಲ್ಲಿ ಚರ್ಚಿಸಲಾಗಿದೆ. ಪರಿಸರ ಮತ್ತು ಅಭಿವೃದ್ಧಿ, ಶ್ರೀಮಂತವರ್ಗದ ಸಾಂಸ್ಕೃತಿಕ ರಾಜಕೀಯ, ಪರಿಸರವಾದ ಮತ್ತು ಅವಕಾಶವಾದ, ಪರಿಸರ ಚಳವಳಿಗಳ ಸಫಲತೆ ಮತ್ತು ವಿಫಲತೆ ಮುಂತಾದ ವಿಚಾರಗಳ ಸೂಕ್ಷ್ಮ ಅಧ್ಯಯನ ನಡೆಸಲಾಗಿದೆ.

**3. ಕರ್ನಾಟಕ ಸಂಸ್ಕೃತಿ ಚರಿತ್ರೆ, ಸಂಪುಟ 3 ರಾಷ್ಟ್ರಕೂಟರಿಂದ ಹೊಯ್ಸಳರ ಅವನತಿಯವರೆಗೆ (2001–2003)**

ರಾಷ್ಟ್ರಕೂಟರಿಂದ ಹೊಯ್ಸಳರವರೆಗಿನ ಸಾಂಸ್ಕೃತಿಕ ಚರಿತ್ರೆಯನ್ನು ರಚಿಸುವ ಪ್ರಯತ್ನವನ್ನು ಈ ಯೋಜನೆಯಲ್ಲಿ ಮಾಡಲಾಗಿದೆ. ಈ ಅಧ್ಯಯನವು ಒಳಗೊಂಡ ಕಾಲಾವಧಿಯಲ್ಲಿ ಸಮಾಜದ ವಿವಿಧ ಸ್ತರಗಳಾದ ಬೇಟೆ, ಪಶುಸಂಗೋಪನೆ, ಕೃಷಿ, ಕೈಗಾರಿಕೆ ಮುಂತಾದವು ಸ್ಪಷ್ಟವಾಗಿ ಕಾಣಿಸಿಕೊಳ್ಳುವ, ಒಟ್ಟೊಟ್ಟಿಗೆ ಇರುವ ಹಾಗೂ ಪ್ರತ್ಯೇಕ ವಾಗಿ ನಿಲ್ಲುವ ಸೂಚನೆಗಳು ಕಾಣಿಸಿಕೊಂಡವು. ಈ ಸಾಮಾಜಿಕ ವಿಕಾಸದ ಪ್ರಕ್ರಿಯೆಗಳನ್ನು ಬಹುತ್ವದ ವಿನ್ಯಾಸದೊಂದಿಗೆ ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

**4. ದಕ್ಷಿಣ ಭಾರತದ ಚರಿತ್ರೆ : ಆಯ್ದ ವಿಷಯಗಳು (2005–06)**

ದಕ್ಷಿಣ ಭಾರತದ ಕೆಲವು ಮಹತ್ವದ ಆಯ್ದ ವಿಷಯಗಳನ್ನು ಈ ಯೋಜನೆಯಲ್ಲಿ ಚರ್ಚಿಸಲಾಗಿದೆ. ಸಂಗಂ ಯುಗ, ರಾಜ್ಯ ನಿರ್ಮಾಣ ಪ್ರಕ್ರಿಯೆ, ಮತ–ಪಂಥಗಳು, ದ್ರಾವಿಡ ಹಾಗೂ ಹಿಂದುಳಿದ ವರ್ಗಗಳ ಚಳವಳಿ ಹಾಗೂ ಭಾಷಾವಾರು ಪ್ರಾಂತ್ಯಗಳ ರಚನೆಗೆ ಸಂಬಂಧಿಸಿದ ವಿಷಯಗಳನ್ನು ವಿವಿಧ ಅಧ್ಯಾಯಗಳಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

**5. ಪಾಶ್ಚಿಮಾತ್ಯ ನಾಗರಿಕತೆ : ಆಯ್ದ ವಿಷಯಗಳು (2006–07)**

ಪಾಶ್ಚಿಮಾತ್ಯ ನಾಗರಿಕತೆಗೆ ಸಂಬಂಧಿಸಿದ ಕೆಲವು ಮಹತ್ವದ ಆಯ್ದ ವಿಷಯಗಳನ್ನು ಈ ಯೋಜನೆಯಲ್ಲಿ ಚರ್ಚಿಸಲಾಗಿದೆ. ಅಮೆರಿಕಾ, ಸೋವಿಯತ್ ಒಕ್ಕೂಟ, ಲ್ಯಾಟಿನ್ ಅಮೆರಿಕಾ ಹಾಗೂ ಆಫ್ರಿಕಾದ ದೇಶಗಳಲ್ಲಿನ ರಾಜಕೀಯ ಹಾಗೂ ಆರ್ಥಿಕ ಬೆಳವಣಿಗೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ವಸಾಹತುಶಾಹಿ, ರಾಷ್ಟ್ರೀಯತೆ, ಗುಲಾಮಗಿರಿ, ಸೋವಿಯತ್ ಒಕ್ಕೂಟದ ವಿಘಟನೆ ಹಾಗೂ ಜಾಗತೀಕರಣಕ್ಕೆ ಸಂಬಂಧಿಸಿದ ಕೆಲವು ಮಹತ್ವದ ವಿಚಾರಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

**6. ಚರಿತ್ರೆ ಅಧ್ಯಯನ – ಅರ್ಧವಾರ್ಷಿಕ ಪತ್ರಿಕೆ (2007)**

ಒಟ್ಟು 12 ಲೇಖನಗಳುಳ್ಳ ಈ ಸಂಚಿಕೆಯು ಚರಿತ್ರೆಯನ್ನು ವರ್ತಮಾನದ ನೆಲೆಯಲ್ಲಿ ನೋಡಿ ಮುಖಾಮುಖಿಯನ್ನಾಗಿಸುವ ಪ್ರಯತ್ನವನ್ನು ಮಾಡಿದೆ. ಚರಿತ್ರೆಯು ಸಮಕಾಲೀನ ಸಂದರ್ಭದಲ್ಲಿ ಬಳಕೆಯಾಗುತ್ತಿರುವ ಹಾಗೂ ನಿರ್ಮಾಣಗೊಳ್ಳುತ್ತಿರುವ ರೀತಿಯ ಕುರಿತು ಇಲ್ಲಿನ ಲೇಖನಗಳು ಮಹತ್ವದ ಪ್ರಶ್ನೆಗಳನ್ನು ಎತ್ತಿವೆ. ಮೊದಲ ನಾಲ್ಕು ಲೇಖನಗಳು ಚರಿತ್ರೆ ಅಧ್ಯಯನ ವಿಧಾನ ಹಾಗೂ ಲೇಖನಕ್ಕೆ ಸಂಬಂಧ ಪಟ್ಟಿವೆ. ನಂತರದ ಆರು ಲೇಖನಗಳು ಕರ್ನಾಟಕದ ಚರಿತ್ರೆಯ ವಿವಿಧ ಮಗ್ಗುಲುಗಳನ್ನು ಪರಿಚಯಿಸಿ ವಿಶ್ಲೇಷಿಸಿವೆ. ಕೊನೆಯ ಎರಡು ಲೇಖನಗಳು ಮೌಖಿಕ ಚರಿತ್ರೆ ಹಾಗೂ ಪುಸ್ತಕ ಪರಿಶೀಲನೆಗೆ ಸಂಬಂಧಪಟ್ಟಿವೆ.

**7. ಚರಿತ್ರೆ ಅಧ್ಯಯನ – ಅರ್ಧವಾರ್ಷಿಕ ಪತ್ರಿಕೆ (2008)**

ಒಟ್ಟು ಹನ್ನೊಂದು ಲೇಖನಗಳನ್ನು ಒಳಗೊಂಡಿರುವ ಈ ಸಂಚಿಕೆಯು ಚರಿತ್ರೆಯ ವಿವಿಧ ಮಗ್ಗುಲುಗಳ ಒಳಹೊಕ್ಕು ವಿಮರ್ಶಿಸುವ ಪ್ರಯತ್ನವನ್ನು ಮಾಡಿದೆ. ಮೊದಲ ಐದು ಲೇಖನಗಳು ಚರಿತ್ರೆ ಲೇಖನಕ್ಕೆ ಸಂಬಂಧಿಸಿದ್ದು, ಚರಿತ್ರೆಯ ವಿಶಾಲತೆ ಹಾಗೂ ವರ್ತಮಾನತೆಯ ಕುರಿತು ಚರ್ಚಿಸಿವೆ. ನಂತರದ ಮೂರು ಲೇಖನಗಳು ಪೋರ್ಚುಗೀಸರು, ಬೇಡರು ಹಾಗೂ ದಲಿತ ಸಂದರ್ಭದ ರಾಜಕಾರಣ ಹಾಗೂ ಸಾಮಾಜಿಕತೆಯ ವಿವಿಧ ಸ್ತರಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿವೆ. ಕೊನೆಯ ಮೂರು ಲೇಖನಗಳು ಮೌಖಿಕ ಚರಿತ್ರೆ ಹಾಗೂ ಪುಸ್ತಕ ಪರಿಶೀಲನೆಗೆ ಸಂಬಂಧ ಪಟ್ಟಿವೆ.

**8. ಚರಿತ್ರೆ ಅಧ್ಯಯನ– ಅರ್ಧವಾರ್ಷಿಕ ಪತ್ರಿಕೆ(2011)**

ಒಟ್ಟು 12 ಲೇಖನಗಳನ್ನು ಒಳಗೊಂಡಿರುವ ಈ ಸಂಚಿಕೆಯಲ್ಲಿ ಪ್ರಮುಖವಾಗಿ ಚರಿತ್ರೆ ಅಧ್ಯಯನ ವಿಧಾನ, ನವ ಚಿಂತನೆಗಳು, ಮೌಖಿಕ ಚರಿತ್ರೆ, ಸ್ಥಳೀಯತೆ, ಸಮುದಾಯಗಳು, ಬ್ರಿಟಿಶ್ ಆರ್ಥಿಕ ನೀತಿ ಮುಂತಾದ ವಿಚಾರಗಳ ಕುರಿತು ಚರ್ಚಿಸಲಾಗಿದೆ.

**9. ಚರಿತ್ರೆ ಅಧ್ಯಯನ– ಅರ್ಧವಾರ್ಷಿಕ ಪತ್ರಿಕೆ(2012)**

ಪತ್ರಿಕೆಯು ಒಟ್ಟು ಹದಿಮೂರು ಲೇಖನಗಳನ್ನು ಒಳಗೊಂಡಿದೆ. ಇಲ್ಲಿ ವಿಶ್ಲೇಷಣೆಗೆ ಒಳಗಾಗಿರುವ ಪ್ರಮುಖ ಪರಿಕಲ್ಪನೆಗಳೆಂದರೆ ನವ ಚಾರಿತ್ರಿಕವಾದ, ರಾಷ್ಟ್ರೀಯತೆ, ಊಳಿಗಮಾನ್ಯ, ಪರಿಸರ, ದಲಿತ, ಬೇಡ, ಜನಸಾಮಾನ್ಯರು ಮುಂತಾದವು.

**10. ಏಷ್ಯಾ : ಚರಿತ್ರೆಯ ವಿವಿಧ ಆಯಾಮಗಳು (2008–10)**

ಈ ಯೋಜನೆಯಲ್ಲಿ ವಸಾಹತು ಪೂರ್ವ ಹಾಗೂ ರಾಜಕೀಯ ಆಯಾಮಗಳ ವಿಶ್ಲೇಷಣೆ ನಡೆಸಲಾಗಿದೆ. ಪಶ್ಚಿಮ ಏಷ್ಯಾ, ಆಗ್ನೇಯ ಏಷ್ಯಾ ಹಾಗೂ ವಸಾಹತು ಏಷ್ಯಾದ ಸಾಂಸ್ಕೃತಿಕ ಹಾಗೂ ಪೂರ್ವ ಏಷ್ಯಾಗಳಲ್ಲಿ ಸಮಾಜ ಹಾಗೂ ಸಂಸ್ಕೃತಿ ರೂಪುಗೊಂಡ ಬಗೆ, ಇಪ್ಪತ್ತನೆಯ ಶತಮಾನದಲ್ಲಿ ಕಾಣಿಸಿಕೊಂಡ ವಸಾಹತುಶಾಹಿತ್ವ, ನಿರ್ವಸಾಹತೀಕರಣ ಹಾಗೂ

ನವವಸಾಹತುಶಾಹಿ ಧೋರಣೆಗಳು, ಪ್ರಾದೇಶಿಕ ಒಕ್ಕೂಟಗಳು ಅಸ್ತಿತ್ವಕ್ಕೆ ಬಂದಿರುವ ಬಗೆ ಮುಂತಾದ ವಿಚಾರಗಳನ್ನು ಚರ್ಚಿಸುವ ಒಟ್ಟು 22 ಲೇಖನಗಳನ್ನು ಈ ಯೋಜನೆಯು ಹೊಂದಿದೆ.

**11. ಯುರೋಪ್ : ಚರಿತ್ರೆಯ ವಿವಿಧ ಆಯಾಮಗಳು (2008–10)**

ಯುರೋಪಿನ ಚರಿತ್ರೆಯನ್ನು ಪ್ರಾಚೀನದಿಂದ ಆಧುನಿಕ ಸಂದರ್ಭದವರೆಗೆ ವಿಶ್ಲೇಷಿಸುವ ಪ್ರಯತ್ನವನ್ನು ಈ ಯೋಜನೆಯಲ್ಲಿ ಮಾಡಲಾಗಿದೆ. ಯುರೋಪಿನ ಪೂರ್ವೇತಿಹಾಸ ಎನ್ನುವ ಆರಂಭದ ಲೇಖನದಿಂದ ಜಾಗತೀಕರಣ ಎನ್ನುವ ಕೊನೆಯ ಲೇಖನದವರೆಗೆ ಯುರೋಪಿನಲ್ಲಾದ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಸ್ಥಿತ್ಯಂತರಗಳ ವಿವರಣೆಗಳನ್ನು ಈ ಯೋಜನೆಯಲ್ಲಿ ನೀಡಲಾಗಿದೆ. ಯುರೋಪಿನ ಚರ್ಚ್ ಹಿನ್ನಲೆಯ ಸಂಪ್ರದಾಯವಾದಿ ಧೋರಣೆಯನ್ನು ವಿಜ್ಞಾನ, ತಂತ್ರಜ್ಞಾನ ಹಾಗೂ ವಿಚಾರಗಳು ಮುಖಾಮುಖಿಯಾಗಿರುವುದು ಹಾಗೂ ಆ ಮೂಲಕ ವೈಜ್ಞಾನಿಕ ಮನೋಧರ್ಮವನ್ನು ಹುಟ್ಟುಹಾಕಿರುವುದರ ಕುರಿತು ಇಲ್ಲಿ ಚರ್ಚಿಸಲಾಗಿದೆ. ಸೋವಿಯತ್ ಒಕ್ಕೂಟದ ವಿಘಟನೆ, ಶೀತಲಸಮರ ಹಾಗೂ ಜಾಗತೀಕರಣ ಇವುಗಳ ಪರಿಣಾಮಗಳ ಕುರಿತಾಗಿಯೂ ವಿಶ್ಲೇಷಣೆ ನಡೆಸಲಾಗಿದೆ.

## ಆ. ಪೂರ್ಣಗೊಳಿಸಿದ ವೈಯಕ್ತಿಕ ಯೋಜನೆಗಳು

**1. ನಗರೀಕರಣ (1996–1997)**

ನಗರೀಕರಣ ಒಂದು ನಿರಂತರ ಪ್ರಕ್ರಿಯೆ. ಗ್ರಾಮೀಣ ಪ್ರದೇಶಗಳು ಪೇಟೆ–ಪಟ್ಟಣಗಳಾಗಿ ಹಾಗೂ ಪೇಟೆ–ಪಟ್ಟಮಗಳು ಬೃಹತ್ ನಗರಗಳಾಗಿ ಬೆಳೆಯುವ ಪ್ರಕ್ರಿಯೆ ಸಂಕೀರ್ಣವಾದುದ್ದು. ಈ ಯೋಜನೆಯಲ್ಲಿ ನಗರೀಕರಣದ ವಿವಿಧ ಹಂತಗಳನ್ನು ಹಾಗೂ ನಗರ ಸಮಾಜ ರೂಪುಗೊಳ್ಳುವ ಬಗೆಯನ್ನು ವಿವರಿಸಲಾಗಿದೆ.

**2. ತುಳು ಸಂಸ್ಕೃತಿ : ಚತುರ್ಮುಖಿ ಅಧ್ಯಯನ (1998–1999)**

ತುಳು ಸಂಸ್ಕೃತಿಯ ನಾಲ್ಕು ಮುಖಗಳ ವಿಮರ್ಶಾತ್ಮಕ ಅಧ್ಯಯನ ಈ ಯೋಜನೆಯ ಉದ್ದೇಶ, ಸಂಸ್ಕೃತಿ ಮುಖ, ಜಾತಿಮುಖ, ಧರ್ಮಮುಖ ಹಾಗೂ ರಂಗಮುಖ ಎನ್ನುವ ಅಧ್ಯಾಯಗಳಲ್ಲಿ ತುಳುನಾಡಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಚರಿತ್ರೆಯನ್ನು ನಿರ್ಮಿಸುವ ಪ್ರಯತ್ನ ಮಾಡಲಾಗಿದೆ.

**3. ವಸಾಹತುಪೂರ್ವ ಕರ್ನಾಟಕದ ನಗರ ಚರಿತ್ರೆ–ಪ್ರಾಚೀನ ಕಾಲದಿಂದ ಟಿಪ್ಪು ಸುಲ್ತಾನನ ಪತನದವರೆಗೆ (2001–2003)**

ವಸಾಹತುಪೂರ್ವ ಕರ್ನಾಟಕದಲ್ಲಿ ಯಾವ ಸ್ವರೂಪದ ನಗರ ವ್ಯವಸ್ಥೆ ಅಸ್ತಿತ್ವದಲ್ಲಿತ್ತು ಹಾಗೂ ನಗರ ಕೇಂದ್ರಗಳು ಯಾವ ಬಗೆಯ ಬಿಕ್ಕಟ್ಟನ್ನು ಎದುರಿಸಿದವು ಎನ್ನುವ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯುವ ಪ್ರಯತ್ನವನ್ನು ಈ ಯೋಜನೆಯಲ್ಲಿ ಮಾಡಲಾಗಿದೆ. ಮೌರ್ಯರಿಂದ ಮೈಸೂರು ಸುಲ್ತಾನರವರೆಗೆ ಬೇರೆ ಬೇರೆ ರಾಜಮನೆತನಗಳ ಆಳ್ವಿಕೆಯಲ್ಲಿ ಪಟ್ಟಣಗಳು ಹಾಗೂ ನಗರಗಳು ನಿರ್ಮಾಣಗೊಂಡ ಕ್ರಿಯಾಶೀಲವಾದ ಬಗೆಗಳನ್ನು ಈ ಯೋಜನೆಯಲ್ಲಿ ವಿಶ್ಲೇಷಿಸಲಾಗಿದೆ.

**4. ವಸಾಹತು ಕರ್ನಾಟಕದ ನಗರ ವ್ಯವಸ್ಥೆ (1799–1947) (2003–2004)**

ವಸಾಹತು ಕರ್ನಾಟಕದ ನಗರ ಅನುಭವಗಳನ್ನು ಈ ಯೋಜನೆಯಲ್ಲಿ ಉದಾಹರಣೆಗಳೊಂದಿಗೆ ವಿಶ್ಲೇಷಿಸಲಾಗಿದೆ. ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿ ಮೈಸೂರು ಸಂಸ್ಥಾನ, ಮದರಾಸು ಪ್ರೆಸಿಡೆನ್ಸಿ, ಬಾಂಬೆ ಪ್ರೆಸಿಡೆನ್ಸಿ, ಹೈದರಾಬಾದ್ ಕರ್ನಾಟಕ ಹಾಗೂ ಕೊಡಗು ಪ್ರದೇಶಗಳಲ್ಲಿ ಇದ್ದಂತ ಸಾರಿಗೆ ವ್ಯವಸ್ಥೆ, ವ್ಯಾಪಾರ ಮತ್ತು ವಾಣಿಜ್ಯ, ಕೈಗಾರಿಕೆಗಳು, ನಗರಾಡಳಿತ ಮುಂತಾದ ವಿಚಾರಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

**5. ಮೈಸೂರು ಸುಲ್ತಾನರು ಹಾಗೂ ಮಂಗಳೂರು ಬಂದರು ಪಟ್ಟಣ : ಸ್ಥಿತ್ಯಂತರಗಳ ಅಧ್ಯಯನ (2004–06)**

ಹೈದರ್ ಅಲಿ ಹಾಗೂ ಟಿಪ್ಪು ಸುಲ್ತಾನ್ ತಮ್ಮ ಬ್ರಿಟಿಷ್ ವಿರೋಧಿ ನೀತಿಗೆ ಮಂಗಳೂರನ್ನು ಸಾಧನವನ್ನಾಗಿ ಬಳಸಿಕೊಂಡ ಬಗೆಯನ್ನು ಈ ಯೋಜನೆಯಲ್ಲಿ ವಿವರಿಸಲಾಗಿದೆ. ಮೈಸೂರು ಸುಲ್ತಾನರು ಮಂಗಳೂರಿನಲ್ಲಿ ನೌಕಾನೆಲೆಯೊಂದನ್ನು ಹೊಂದಲು ನಡೆಸಿದ ಪ್ರಯತ್ನಗಳು, ಮೈಸೂರು ಸುಲ್ತಾನರ ವ್ಯಾಪಾರ – ವಾಣಿಜ್ಯ ನೀತಿ, ಧಾರ್ಮಿಕ ನೀತಿ, ಪಾಳೆಯಗಾರರೊಡನೆ ನಡೆಸಿದ ಯುದ್ಧಗಳು, ಮಂಗಳೂರನ್ನು ತಮ್ಮ ಎರಡನೇ ರಾಜಧಾನಿಯನ್ನಾಗಿ ಮಾಡಲು ನಡೆಸಿದ ಪ್ರಯತ್ನಗಳು ಮುಂತಾದ ವಿಚಾರಗಳ ಕೂಲಂಕಷ ಅಧ್ಯಯನವನ್ನು ಈ ಯೋಜನೆಯಲ್ಲಿ ಮಾಡಲಾಗಿದೆ.

**6. ಕೆನರಾದ ವಿಭಜನೆ (2006–08)**

ಬ್ರಿಟಿಷ್ ಸರ್ಕಾರ 1862ರಲ್ಲಿ ಕೆನರಾವನ್ನು ಉತ್ತರ ಕೆನರಾ ಹಾಗೂ ದಕ್ಷಿಣ ಕೆನರಾ ಎಂಬುದಾಗಿ ವಿಭಜಿಸಿ, ಉತ್ತರ ಕೆನರಾವನ್ನು ಬಾಂಬೆ ಪ್ರೆಸಿಡೆನ್ಸಿಗೆ ಹಾಗೂ ದಕ್ಷಿಣ ಕೆನರಾವನ್ನು ಮದರಾಸು ಪ್ರೆಸಿಡೆನ್ಸಿಗೆ ಸೇರಿಸಿತು. ಈ ವಿಭಜನೆಗೆ ಕಾರಣವಾದ ಯುರೋಪಿನ ಹತ್ತಿ ರಾಜಕೀಯ, ಹತ್ತಿ ಬಿಕಟ್ಟು, ಅಮೆರಿಕಾದ ಆಂತರಿಕ ಯುದ್ಧ, ಪ್ರೆಸಿಡೆನ್ಸಿಗಳ ನಡುವಿನ

ಭಿನ್ನಾಭಿಪ್ರಾಯಗಳು, ಬಂದರು ಅಭಿವೃದ್ಧಿ ಯೋಜನೆಗಳು ಮುಂತಾದ ವಿಚಾರಗಳನ್ನು ಈ ಯೋಜನೆಯಲ್ಲಿ ಚರ್ಚಿಸಲಾಗಿದೆ.

**7. ತುಳುನಾಡ ಸಿರಿ : ಬದುಕು–ಹೋರಾಟದ ಕಥನ (2009–10)**
ತುಳುನಾಡಿನ ಪ್ರಾದೇಶಿಕ ಚೌಕಟ್ಟಿನಲ್ಲಿ ಸಿರಿ ಆರಾಧನೆ ಪಡೆದುಕೊಂಡಿರುವ ಮಹತ್ವ, ಸಿರಿ ಪಾಡ್ದನ ಒಳಗೊಂಡಿರುವ ವಿಚಾರಗಳು, ಸಿರಿಯ ಕುರಿತಾಗಿ ನಡೆದಿರುವ ಅಧ್ಯಯನಗಳು ಹಾಗೂ ತುಳುನಾಡಿನ ಸ್ಥಳೀಯ ಚರಿತ್ರೆ ರಚನೆಗೆ ಇದು ನೆರವಾಗುವ ಬಗೆಗಳನ್ನು ಈ ಯೋಜನೆಯಲ್ಲಿ ಚರ್ಚಿಸಲಾಗಿದೆ. ಮಾತೃವಂಶೀಯತೆ ಹಾಗೂ ಊಳಿಗಮಾನ್ಯತೆ ಎನ್ನುವ ಕುಟುಂಬ ಹಾಗೂ ಭೂಮಿಗೆ ಸಂಬಂಧಿಸಿದ ವಿಚಾರಗಳ ಮೂಲಕ ಸಿರಿಯನ್ನು ನೋಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ರಾಜಕೀಯ ಹಾಗೂ ಸಾಮಾಜಿಕ ಸಂಘರ್ಷದ ನೆಲೆಗಳನ್ನು ಸಿರಿ ಪಾಡ್ದನದ ಮೂಲಕ ಗುರುತಿಸಲಾಗಿದೆ.

**8. ಕೆಳದಿ ನಾಯಕರು ಹಾಗೂ ತುಳುನಾಡು (2008–10)**
ತುಳುನಾಡಿನ ಚರಿತ್ರೆಯಲ್ಲಿ ಕೆಳದಿ ನಾಯಕರ ಆಳ್ವಿಕೆಯ ಅವಧಿ ಮಹತ್ವವಾದ ಸ್ಥಾನವನ್ನು ಪಡೆದುಕೊಂಡಿದೆ. ಈ ಅವಧಿಯಲ್ಲಿ ತುಳುನಾಡು ರಾಜಕೀಯವಾಗಿ ಮಾತ್ರವಲ್ಲದೆ ಕೃಷಿ ಹಾಗೂ ನಗರ ವ್ಯವಸ್ಥೆಗಳೆರಡರಲ್ಲೂ ಅನೇಕ ಬದಲಾವಣೆಗಳನ್ನು ಕಂಡಿತು. ಈ ಬದಲಾವಣೆಗಳನ್ನು ಗುರುತಿಸಿ, ಅದರ ಪರಿಣಾಮಗಳನ್ನು ವಿಶ್ಲೇಷಿಸುವ ಉದ್ದೇಶ ಈ ಯೋಜನೆಯದ್ದಾಗಿದೆ. ನಾಯಕರು ಹಾಗೂ ಪೋರ್ಚುಗೀಸರ ಮುಖಾಮುಖಿ, ತುಳುನಾಡಿನ ಅರಸು ಮನೆತನಗಳ ಕೆಳದಿ ನಾಯಕರೊಂದಿಗಿನ ಸಂಬಂಧ, ತುಳುನಾಡಿಗೆ ಕನ್ನಡ ಸಮುದಾಯಗಳ ಪ್ರವೇಶ ಮುಂತಾದ ವಿಚಾರಗಳನ್ನು ಈ ಯೋಜನೆಯಲ್ಲಿ ಅಧ್ಯಯನ ನಡೆಸಲಾಗುತ್ತಿದೆ.

**9. ಯುದ್ಧ ಹಾಗೂ ಒಪ್ಪಂದ (17–18ನೇ ಶತಮಾನಗಳ ದಕ್ಷಿಣ ಭಾರತದ ರಾಜಕಾರಣ) (2010–11)**
ದಕ್ಷಿಣ ಭಾರತದ ಚರಿತ್ರೆಯಲ್ಲಿ 17 ಮತ್ತು 18ನೇ ಶತಮಾನಗಳು ಅನೇಕ ಬಗೆಯ ಸ್ಥಿತ್ಯಂತರಗಳಿಗೆ ಕಾರಣವಾದ ಕಾಲಾವಧಿಯಾಗಿದೆ. ಹೈದರ್‌ಅಲಿ ಮತ್ತು ಟಿಪ್ಪು ಸುಲ್ತಾನ್, ಆರ್ಕಾಟ್‌ನ ನವಾಬ, ಹೈದರಾಬಾದಿನ ನಿಜಾಮ, ಹಾಗೂ ಮರಾಠರು ಸ್ಥಳೀಯ ಶಕ್ತಿಗಳಾಗಿದ್ದರೆ, ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಹಾಗೂ ಬ್ರಿಟಿಷರು ವಿದೇಶಿ ಶಕ್ತಿಗಳಾಗಿ ಪರಸ್ಪರ ಮುಖಾಮುಖಿಗಳಾದರು. ಇದು ನಿರಂತರ ಯುದ್ಧಗಳು ಹಾಗೂ ಒಪ್ಪಂದಗಳಿಗೆ ಕಾರಣವಾಯಿತು ಈ ವಿಚಾರಗಳನ್ನು ಯೋಜನೆಯಲ್ಲಿ ಅಧ್ಯಯನ ನಡೆಸಲಾಗುತ್ತಿದೆ. ದಕ್ಷಣ ಭಾರತದ ರಾಜಕಾರಣ ಇದರಿಂದಾಗಿ ಪಡೆದುಕೊಂಡ ತಿರುವು ಹಾಗೂ ಕೊನೆಗೆ ಬ್ರಿಟಿಷರು ಮೇಲುಗೈ ಸಾಧಿಸಿರುವುದು ಯೋಜನೆಯ ಕೇಂದ್ರ ವಿಚಾರವಾಗಿದೆ.

**14. ಪ್ರಗತಿಯಲ್ಲಿರುವ ಯೋಜನೆಗಳು**

1. ವಸಾಹತು ಕರ್ನಾಟಕದ ವಾಣಿಜ್ಯ ಮಂಡಳಿಗಳು(2013–15)
2. ತುಳು ಕರ್ನಾಟಕದ ರಾಷ್ಟ್ರೀಯತೆಯ ಅಭಿವ್ಯಕ್ತಿಗಳು(2013–15)
3. ಏಕೀಕರಣೋತ್ತರ ಕರ್ನಾಟಕದ ಪರಿಸರ ಚಳವಳಿಗಳು(ಮರುಮುದ್ರಣ, 2014–15)
4. ಕರ್ನಾಟಕ ಸಂಸ್ಕೃತಿ ಚರಿತ್ರೆ– ಸಂಪುಟ 3(ರಾಷ್ಟ್ರಕೂಟರಿಂದ ಹೊಯ್ಸಳವರೆಗೆ), (ಮರುಮುದ್ರಣ– 2014–15)
5. ಕರ್ನಾಟಕ ಚರಿತ್ರೆ– ಸಂಪುಟ 2, ಕ್ರಿ.ಶ. 640–1336, (ಮರುಮುದ್ರಣ– 2014–15)

**15. ಪ್ರಕಟಣೆಗಳು**
**ಪ್ರಕಟಿತ ಕೃತಿಗಳು**
**1. ನಗರೀಕರಣ (1997), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ**
ಆರ್ಥಿಕ ಚರಿತ್ರೆ ನಿರ್ಮಾಣ ಸಂದರ್ಭದಲ್ಲಿ ನಗರೀಕರಣ ಪ್ರಕ್ರಿಯೆ ಬಹುಮುಖ್ಯವಾದ ವಿಚಾರವಾಗಿ ಕಂಡು ಬರುತ್ತದೆ. ಈ ಕೃತಿಯಲ್ಲಿ ನಗರ ಚರಿತ್ರೆ ಅಧ್ಯಯನದ ಮಹತ್ವವನ್ನು ತಿಳಿಸಲಾಗಿದೆ. ನಗರಕ್ರಾಂತಿ ಪರಿಕಲ್ಪನೆ, ನಗರೀಕರಣದಿಂದಾಗುವ ಸಮಸ್ಯೆಗಳು, ನಗರ ಜೀವನದ ಬಿನ್ನತೆಗಳು, ನಗರಿಕರಣದ ವಿವಿಧ ಹಂತಗಳು, ನಗರತ್ವ, ವರ್ತಕ ಸಂಘಗಳು, ನಗರ ಸಮಾಜ, ನಗರ ಯೋಜನೆ ಮುಂತಾದ ವಿಷಯಗಳ ವಿಶ್ಲೇಷಣೆಯನ್ನು ಈ ಕೃತಿಯಲ್ಲಿ ಮಾಡಲಾಗಿದೆ.

**2. ಪರಿಸರ ಚಳವಳಿಗಳು (1999), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ**
ಪರಿಸರ ಚಳವಳಿಗಳ ಸ್ವರೂಪ ಮತ್ತು ಸೈದ್ಧಾಂತಿಕ ನೆಲೆಗಳು ಹಾಗೂ ಏಕೀಕರಣೋತ್ತರ ಕರ್ನಾಟಕದ ಪ್ರಮಗಖ ಪರಿಸರ ಚಳವಳಿಗಳಿಗೆ ಸಂಬಂಧಪಟ್ಟಂತ ವಿಮರ್ಶಾತ್ಮಕವಾದ ಅಧ್ಯಯನವನ್ನು ಈ ಕೃತಿಯಲ್ಲಿ ಮಾಡಲಾಗಿದೆ. ಜಾಗತಿಕ ಮಟ್ಟದಲ್ಲಿ ಪರಿಸರ ಬಿಕ್ಕಟ್ಟು ಕಾಣಿಸಿಕೊಳ್ಳುವುದಕ್ಕೆ ಕಾರಣವಾದ ಅಂಶಗಳು, ಬಂಡವಾಳ ಪ್ರಕೃತಿಯನ್ನು ತನ್ನ ಸ್ವಾರ್ಥದ ನೆಲೆಯಲ್ಲಿ ಬಳಸಿಕೊಂಡಿರುವುದು ಹಾಗೂ ಪರಿಸರ ನಾಶದ ವಿರುದ್ಧ ಹುಟ್ಟಿಕೊಂಡಿರುವ ಪರಿಸರ ಚಳವಳಿಗಳ ಹೋರಾಟದ ಹೆಜ್ಜೆಯನ್ನು ಗುರುತಿಸುವ ಪ್ರಯತ್ನಗಳನ್ನು ಈ ಕೃತಿಯಲ್ಲಿ ಮಾಡಲಾಗಿದೆ.

**3. ತುಳುಸಂಸ್ಕೃತಿ: ಚತುರ್ಮುಖಿ ಅಧ್ಯಯನ (1999), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ**
ಕರ್ನಾಟಕದ ಭಾಗವಾಗಿರುವ ತುಳುನಾಡು ಭೌಗೋಳಿಕವಾಗಿ, ಭಾಷಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ತನ್ನದೇ ಆದ ವೈಶಿಷ್ಟ್ಯತೆಗಳ ನೆಲೆಯಲ್ಲಿ ಪ್ರತ್ಯೇಕವಾಗಿಯೇ ಗುರುತಿಸಿಕೊಂಡಿದೆ. ತುಳುನಾಡಿನ ಸಂಸ್ಕೃತಿ, ಜಾತಿ, ಧರ್ಮ ಹಾಗೂ ರಂಗ ಇವುಗಳ ವಿಶ್ಲೇಷಣಾತ್ಮಕ ಅಧ್ಯಯನವನ್ನು ಈ ಕೃತಿಯಲ್ಲಿ ಮಾಡಲಾಗಿದೆ. ತುಳುನಾಡಿನ ಜಾತಿ ಶ್ರೇಣೀಕರಣ, ಭೂತಾರಾಧನೆ, ಯಕ್ಷಗಾನ, ಮುಂತಾದ ವಿಷಯಗಳ ತಲಸ್ಪರ್ಶಿ ಅಧ್ಯಯನವನ್ನು ಈ ಕೃತಿಯಲ್ಲಿ ಮಾಡಲಾಗಿದೆ.

**4. ಪ್ರಭುತ್ವ ಮತ್ತು ಜನತೆ (2004), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ**
ಮಧ್ಯಕಾಲೀನ ಕರ್ನಾಕಟದ ಜನರ ಚರಿತ್ರೆಯನ್ನು ರಚಿಸುವುದು ಈ ಕೃತಿಯ ಮುಖ್ಯ ಉದ್ದೇಶ. ಅರಸಕೇಂದ್ರಿತ ಚರಿತ್ರೆ ಬರವಣಿಗೆಯ ವಿಧಾನಗಳನ್ನು ಕೈಬಿಟ್ಟು ಜನಕೇಂದ್ರಿತ ಚರಿತ್ರೆ ಬರವಣಿಗೆಯ ವಿಧಾನ ಹಾಗೂ ಸೈದ್ಧಾಂತಿಕತೆಯನ್ನು ಈ ಕೃತಿಯಲ್ಲಿ ಅನುಸರಿಸಲಾಗಿದೆ. ಕೃಷಿ ವ್ಯವಸ್ಥೆ, ಉತ್ಪಾದನಾ ವ್ಯವಸ್ಥೆ, ಸಮಾಜದ ರಚನೆ, ನಗರ ವ್ಯವಸ್ಥೆ, ಅರ್ಪಣಾ ಮರಣ, ಧಾರ್ಮಿಕ ಪ್ರಭುತ್ವ, ಧಾರ್ಮಿಕ ಸಿದ್ಧಾಂತಗಳು, ಸ್ಮಾರಕಗಳು ಎನ್ನುವ ಅಧ್ಯಾಯಗಳನ್ನು ಈ ಕೃತಿಯು ಒಳಗೊಂಡಿದೆ. ಚರಿತ್ರೆಯ ಕುರಿತಾದ ಏಕಪಕ್ಷೀಯ ಧೋರಣೆಗಳನ್ನು ಹಾಗೂ ಅವುಗಳ ಹಿಂದಿರುವ ಸಾಂಸ್ಕೃತಿಕ ರಾಜಕೀಯವನ್ನು ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

**5. ವಸಾಹತುಪೂರ್ವ ಕರ್ನಾಟಕದ ನಗರ ಚರಿತ್ರೆ (2006), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ**
ವಸಾಹತುಪೂರ್ವ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ನಗರ ವ್ಯವಸ್ಥೆಯ ವಿವಿಧ ಆಯಾಮಗಳನ್ನು ಈ ಕೃತಿಯಲ್ಲಿ ವಿಶ್ಲೇಷಿಸಿಲಾಗಿದೆ. ಪ್ರಮುಖ ನಗರ ಕೇಂದ್ರಗಳು, ನಗರ ಕೇಂಧ್ರಗಳ ಸ್ಥಿತ್ಯಂತರ, ನಗರ ಅರ್ಥ ವ್ಯವಸ್ಥೆ, ನಗರ ಆಡಳಿತ ಎನ್ನುವ ಅಧ್ಯಾಯಗಳಲ್ಲಿ ಪೇಟೆ–ಪಟ್ಟಣಗಳ ಹುಟ್ಟು, ಬೆಳವಣಿಗೆ ಹಾಗೂ ಸ್ಥಿತ್ಯಂತರಗಳ ಕುರಿತು ಚರ್ಚಿಸಲಾಗಿದೆ.

**6. ವಸಾಹತುಶಾಹಿ ಮತ್ತು ನಗರೀಕರಣ (2007), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ**
ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿ ಕರ್ನಾಟಕವು ಯಾವ ಬಗೆಯ ಅನುಭವಗಳಿಗೆ ಒಳಗಾಯಿತು ಎನ್ನುವ ವಿಚಾರವನ್ನು ಈ ಕೃತಿಯಲ್ಲಿ ವಿಶ್ಲೇಷಿಸಲಾಗಿದೆ. ವಸಾಹತು ಕರ್ನಾಟಕದ ಭೌಗೋಳಿಕ ಎಲ್ಲೆಕಟ್ಟುಗಳು, ಕೃಷಿಯ ವಾಣಿಜ್ಯೀಕರಣ ಮತ್ತು ಮಾರುಕಟ್ಟೆಯ ಪ್ರವೇಶ, ವ್ಯಾಪಾರ ಮತ್ತು ವಾಣಿಜ್ಯ, ಕೈಗಾರಿಕೆ ಮತ್ತು ಕೈಗಾರಿಕೀಕರಣ, ಸಾರಿಗೆ ವ್ಯವಸ್ಥೆ, ಮುನಿಸಿಪಾಲಿಟಿಗಳು ಮತ್ತು ನಗರಾಡಳಿತ ಎನ್ನುವ ಅಧ್ಯಾಯಗಳಲ್ಲಿ ಬ್ರಿಟಿಷ್ ಮಾದರಿಯ ಆಧುನೀಕರಣ ಹಾಗೂ ಕೈಗಾರಿಕಾ ಅರ್ಥವ್ಯವಸ್ಥೆಯ ಹುಟ್ಟಿಗೆ ಸಂಬಂಧಿಸಿದಂತೆ ಹಾಗೂ ಸ್ಥಳೀಯವಾಗಿ ಈ ಬದಲಾವಣೆಗಳು ಬೀರಿದ ಪರಣಾಮಗಳ ಕುರಿತಂತೆ ಚರ್ಚಿಸಲಾಗಿದೆ.

**7. ತುಳುನಾಡ ಸಿರಿ : ಬದುಕು–ಹೋರಾಟದ ಕಥನ (2010), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ**
ಸಿರಿ ಪಾಡ್ದನವು ಮಾತೃವಂಶೀಯ ಕುಟುಂಬವೊಂದರ ನಾಲ್ಕು ತಲೆಮಾರುಗಳ ಬದುಕಿನ ವಿವಿಧ ಅವಸ್ಥೆಗಳ ವಿವರಗಳನ್ನು ಒಳಗೊಂಡ ಸುದೀರ್ಘವಾದ ಜನಪದ ಕಾವ್ಯ. ಈ ಕೃತಿಯಲ್ಲಿ ಸಿರಿ ಪಠ್ಯದೊಳಗೆ ಕಂಡುಬರುವ ರಾಜಕೀಯ ಸಂಘರ್ಷದ ನೆಲೆಗಳು, ಊಳಿಗಮಾನ್ಯ ಸಾಮಾಜಿಕ ರಚನೆ, ಮಾತೃವಂಶೀಯತೆ ಮುಂತಾದ ವಿಚಾರಗಳ ಸೂಕ್ಷ್ಮ ಅಧ್ಯಯನ ನಡೆಸಲಾಗಿದೆ. ಮಹಾಕಾವ್ಯ ಪರಿಕಲ್ಪನೆ, ಪಾಡ್ದನಗಳ ತಾತ್ವಿಕತೆ ಹಾಗೂ ಐಡೆಂಟಿಟಿಯ ಕುರಿತಾಗಿಯೂ ಚರ್ಚಿಸಲಾಗಿದೆ. ತುಳುನಾಡಿನ ಸ್ಥಳೀಯ ಚರಿತ್ರೆ ನಿರ್ಮಾಣದಲ್ಲಿ ಈ ಮೌಖಿಕ ಆಕರದ ಮಹತ್ವವನ್ನು ವಿಶ್ಲೇಷಣೆ ನೆಡೆಸಲಾಗಿದೆ.

**8. ಕೆನರಾದ ವಿಭಜನೆ: ಹತ್ತಿ ರಾಜಕೀಯದ ವಿಶ್ಲೇಷಣೆ(2010), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ**
ಈ ಕೃತಿಯಲ್ಲಿ 1862ರಲ್ಲಿ ನಡೆದ ಕೆನರಾದ ವಿಭಜನೆಗೆ ಬ್ರಿಟಿಶ್ ಸರ್ಕಾರ ಹಾಗೂ ಬ್ರಿಟನ್‌ನ ಹತ್ತಿ ಉದ್ದಿಮೆಗಳು ಹೇಗೆ ಕಾರಣವಾದವು ಎನ್ನುವ ಅಂಶವನ್ನು ಕೂಲಂಕಷವಾಗಿ ಚರ್ಚಿಸಲಾಗಿದೆ. ಇದರ ಜೊತೆಗೆ ಬ್ರಿಟಿಶ್ ಸರ್ಕಾರದ ಅಭಿವೃದ್ಧಿ ಯೋಜನೆಗಳು ಹಾಗೂ ಆಧುನಿಕತೆಯ ಕುರಿತಾಗಿಯೂ ಚರ್ಚಿಸಲಾಗಿದೆ.

**9. ತುಳುನಾಡು ಕನ್ನಡನುಡಿ: ತುಳು ಕರ್ನಾಟಕದ ನಾಡು–ನುಡಿ, ಚಿಂತನೆ(2012), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ**
ಭೌಗೋಳಿಕವಾಗಿ, ಭಾಷಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ತನ್ನದೇ ಆದ ಅಸ್ತಿತ್ವವನ್ನು ಹೊಂದಿರುವ ತುಳುನಾಡು, ಕನ್ನಡ ಭಾಷೆ ಹಾಗೂ ಕನ್ನಡ ಭೂಪ್ರದೇಶಗಳೊಂದಿಗೆ ಮುಖಾಮುಖಿಯಾದ ರೀತಿ ಹಾಗೂ ಅದರ ಪರಿಣಾಮಗಳು, ಭಾಷಿಕವಾಗಿ ಹಾಗೂ ರಾಜಕಾರಣದ ನೆಲೆಯಲ್ಲಿ ಕನ್ನಡದೊಂದಿಗಿನ ಸಂಬಂಧ, ತುಳು ಅಸ್ಮಿತೆಯ ಪ್ರಶ್ನೆಗಳು ಮುಂತಾದ ಮಹತ್ವದ ವಿಚಾರಗಳನ್ನು ಈ ಕೃತಿಯು ಚರ್ಚಿಸುತ್ತದೆ.

**10. ಚರಿತ್ರೆ ಕಥನ, ಪಲ್ಲವ ಪ್ರಕಾಶನ, ಚನ್ನಪಟ್ಟಣ, 2009**
ಈ ಕೃತಿಯು 12 ಸಂಶೋಧನಾ ಲೇಖನಗಳನ್ನು ಒಳಗೊಂಡಿದೆ. ಲೇಖನಗಳನ್ನು ಇಲ್ಲಿ ಸಮಾಜ, ಪರಿಸರ, ನಗರ ಎನ್ನುವ ಮೂರು ಭಾಗಗಳಲ್ಲಿ ವಿಂಗಡಿಸಲಾಗಿದೆ. ಈ ಕೃತಿಯಲ್ಲಿ ಪ್ರಭುತ್ವ ವ್ಯವಸ್ಥೆ ಹುಟ್ಟುಹಾಕಿದ ಸಂಸ್ಥೆಗಳು ಹಾಗೂ ಚಿಂತನೆಗಳ

ಸ್ವರೂಪವನ್ನು ವಿಶ್ಲೇಷಿಸುವ, ಐಡೆಂಟಿಟಿಯ ನೆಲೆಯಲ್ಲಿ ಪ್ರಭುತ್ವದ ಚೌಕಟ್ಟನ್ನು ಮೀರುವ ಪ್ರಯತ್ನಗಳ ಸ್ವರೂಪವನ್ನು ಪತ್ತೆ ಹಚ್ಚುವ, ಮಾನವ ಹಾಗೂ ಪರಸರದ ನಡುವಿನ ಸಂಬಂಧಗಳನ್ನು ವ್ಯಾಖ್ಯಾನಿಸುವ ಹಾಗೂ ಮಾನವ ವಿಕಾಸದ ವಿವಿಧ ಹಂತಗಳಲ್ಲಿ ಬಹುಮುಖ್ಯ ಪಾತ್ರ ವಹಿಸಿದ ನಗರ ಅರ್ಥವ್ಯವಸ್ಥೆಯ ಸಂಕೀರ್ಣತೆಗಳನ್ನು ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

**ಸಂಪಾದಿತ ಕೃತಿಗಳು**

**01 ಚರಿತ್ರೆ ವಿಶ್ವಕೋಶ (2001) – ಸಹ ಸಂಪಾದಕ**

ಚರಿತ್ರೆ ವಿಶ್ವಕೋಶವು ಜಾಗತಿಕ ಚರಿತ್ರೆಯನ್ನು ನಿರ್ಮಿಸುವ ಒಂದು ಪ್ರಯತ್ನವಾಗಿದೆ. ಜಗತ್ತಿನ ಚರಿತ್ರೆಯಲ್ಲಿ ಘಟಿಸಿದ ಕೆಲವು ಮಹತ್ವದ ಘಟನೆಗಳನ್ನು ಇಲ್ಲಿ ಆಯಾ ಖಂಡಕ್ಕೆ ಸಂಬಂಧಪಟ್ಟಂತೆ ವಿಂಗಡಿಸಿಕೊಂಡು ವಿಶ್ಲೇಷಿಸಲಾಗಿದೆ. ಈ ಕೃತಿಯು ಒಟ್ಟು 09 ಭಾಗಗಳನ್ನು ಹೊಂದಿದೆ. ಅವುಗಳೆಂದರೆ ಚರಿತ್ರೆ ಅಧ್ಯಯನ ವಿಧಾನ ಹಾಗೂ ಲೇಖನ, ಭೂಮಿಯ ಚರಿತ್ರೆ, ಏಷ್ಯಾ, ಆಫ್ರಿಕಾ, ಯುರೋಪ್, ಅಮೆರಿಕಾ, ಆಸ್ಟ್ರೇಲಿಯಾ ಶಾಂತಮಹಸಾಗರದ ದ್ವೀಪಗಳು ಒಸೆನಿಯಾ, ಭಾರತ ಉಪಖಂಡ ಹಾಗೂ ಕರ್ನಾಟಕ

**02. ದಕ್ಷಿಣ ಭಾರತದ ಚರಿತ್ರೆ : ಆಯ್ದ ವಿಷಯಗಳು (2006)**

ದಕ್ಷಿಣ ಭಾರತದ ಚರಿತ್ರೆಯ ಕೆಲವು ಮಹತ್ವದ ವಿಷಯಗಳನ್ನು ಆಯ್ದುಕೊಂಡು ಇಲ್ಲಿ ಚರ್ಚಿಸಲಾಗಿದೆ. ದಕ್ಷಿಣ ಭಾರತದ ಆರಂಭಿಕ ಚರಿತ್ರೆ, ರಾಜ್ಯಗಳ ಸ್ವರೂಪ, ಮತಪಂಥಗಳ ಬೆಳವಣಿಗೆ, ದ್ರಾವಿಡ ಮತ್ತು ಹಿಂದುಳಿದ ವರ್ಗಗಳ ಚಳವಳಿ, ಭಾಷಾವಾರು ಪ್ರಾಂತ್ಯಗಳ ರಚನೆ ಎನ್ನುವ ಅಧ್ಯಾಯಗಳಲ್ಲಿ ಆರಂಭಿಕ ಚರಿತ್ರೆಯಿಂದ ಏಕೀಕರಕಣದವರೆಗಿನ ಬೆಳವಣಿಗೆಗಳನ್ನು ವಿಶ್ಲೇಣೆ ನಡೆಸಲಾಗಿದೆ.

**03. ಪಾಶ್ಚಿಮಾತ್ಯ ನಾಗರಿಕತೆ : ಆಯ್ದ ವಿಷಯಗಳು (2007)**

ಪಾಶ್ಚಿಮಾತ್ಯ ನಾಗರಿಕತೆಯು ಆಧುನಿಕ ಸಂದರ್ಭದಲ್ಲಿ ಜಗತ್ತಿನ ಮೇಲೆಯೇ ಪರಿಣಾಮ ಬೀರಿದಂಥ ಕೆಲವು ಪ್ರಮುಖ ವಿಚಾರಗಳನ್ನು ಈ ಕೃತಿಯಲ್ಲಿ ವಿಶ್ಲೇಷಿಸಲಾಗಿದೆ. ಅಮೆರಿಕಾದಲ್ಲಿ ವಸಾಹತುಶಾಹಿ ವಿಸ್ತರಣೆ ಮತ್ತು ಪ್ರತಿರೋಧ, ಅಮೆರಿಕಾದಲ್ಲಿ ಗುಲಾಮಗಿರಿಯ ಸಮಸ್ಯೆ, ಸೋವಿಯತ್ ಒಕ್ಕೂಟದಲ್ಲಿ ಕಮ್ಯೂನಿಸಂ, ಲ್ಯಾಟಿನ್ ಅಮೆರಿಕಾ ಹಾಗೂ ಆಫ್ರಿಕಾದ ವಸಹತುಶಾಹಿ ವಿರೋಧಿ ಹೋರಾಟಗಳು, ಜಾಗತೀಕರಣ ಎನ್ನುವ ಅಧ್ಯಾಯಗಳಲ್ಲಿ ಅಮೆರಿಕಾದ ಸ್ವತಂತ್ರ್ಯ ಹೋರಾಟ, ಗುಲಾಮಗಿರಿಯ ಪ್ರಶ್ನೆಗಳು, ಸೋವಿಯತ್ ಒಕ್ಕೂಟದ ವಿಘಟನೆ, ವಸಾಹತು ವಿರೋಧಿ ಹೋರಾಟಗಳು ಹಾಗೂ ಜಾಗತೀಕರಣ ಬೀರಿದ ಪರಿಣಾಮಗಳ ಕುರಿತು ಚರ್ಚಿಸಲಾಗಿದೆ.

**04 ಚರಿತ್ರೆ ಅಧ್ಯಯನ (ಸಂಪುಟ–3 ಸಂಚಿಕೆ–1, ಜುಲೈ–ಡಿಸೆಂಬರ್ 2007)**

ಚರಿತ್ರೆ ಅಧ್ಯಯನ ಅರ್ಧವಾರ್ಷಿಕ ಪತ್ರಿಕೆಯಾಗಿದ್ದು, ಚರಿತ್ರೆಯ ಬದಲಾದ ಅಧ್ಯಯನ ಕ್ರಮ ಹಾಗೂ ಸಿದ್ಧಾಂತಗಳ ಕುರಿತಾದ ಚರ್ಚೆಗೆ ಅವಕಾಶ ಕಲ್ಪಿಸಿದೆ. ಈ ಸಂಚಿಕೆಯು 12 ಲೇಖನಗಳನ್ನು ಒಳಗೊಂಡಿದೆ. ಕರ್ನಾಟಕದ ಚರಿತ್ರೆ ರಚನೆಯ ವಿವಿಧ ಮಾದರಿಗಳು ಸಮಕಾಲೀನ ಪ್ರಶ್ನೆಗಳು, ಆನುಷಂಗಿಕ ಆಕರಗಳ ಬಳಕೆ ಮುಂತಾದ ವಿಚಾರಗಳು ಇಲ್ಲಿ ವಿಶ್ಲೇಷಣೆಗೊಂಡಿವೆ. ಅದೇ ರೀತಿ ಕರ್ನಾಟಕದ ಚರಿತ್ರೆಯ ವಿವಿಧ ಮಗ್ಗುಲುಗಳನ್ನು ಪರಿಚಯಿಸಿ, ವಿಶ್ಲೇಶಿಸುವ ಪ್ರಯತ್ನವನ್ನೂ ಇಲ್ಲಿನ ಲೇಖನಗಳು ಮಾಡಿವೆ.

**05. ಚರಿತ್ರೆ ಅಧ್ಯಯನ (ಸಂಪುಟ 3, ಸಂಚಿಕೆ 2, ಜನವರಿ– ಜೂನ್ 2008)**

ಚರಿತ್ರೆ ಅಧ್ಯಯನದ ಈ ಸಂಚಿಕೆಯು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಚರಿತ್ರೆಯನ್ನು ಪರಿಭಾವಿಸುವ ಪ್ರಯತ್ನವನ್ನು ಮಾಡಿದೆ. ಸಬಾಲ್ಟರ್ನ್ ಅಧ್ಯಯನ, ನವ'ಚಾರಿತ್ರಿಕವಾದ, ಚರಿತ್ರೆಯ ವರ್ತಮಾನತೆ, ಅವ್ಯಕ್ತ ಸಂಸ್ಕೃತಿ ಎನ್ನುವ ಚರಿತ್ರೆಯ ಸೃಜನಶೀಲ ನೆಲೆಗಳನ್ನು ಇಲ್ಲಿನ ಲೇಖನಗಳು ವ್ಯಾಖ್ಯಾನಿಸಿವೆ. ಕರ್ನಾಟಕದ ಚರಿತ್ರೆಯ ಬಹುಮುಖಿ ನೆಲೆಗಳನ್ನು ಪುನಾರಚಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

**6. ಚರಿತ್ರೆ ಅಧ್ಯಯನ(ಸಂಪುಟ 7, ಸಂಚಿಕೆ 1, ಜುಲೈ–ಡಿಸೆಂಬರ್, 2011)**

ಚರಿತ್ರೆ ಅಧ್ಯಯನದ ಈ ಸಂಚಿಕೆಯಲ್ಲಿ ಚರಿತ್ರೆಯ ಹೊಸ ಗ್ರಹಿಕೆಯ ಕುರಿತಾಗಿ ಚಿಂತನೆ ನಡೆಸಲಾಗಿದೆ. ಈ ಸಂಚಿಕೆಯು ಒಟ್ಟು ಹನ್ನೆರಡು ಲೇಖನಗಳನ್ನು ಒಳಗೊಂಡಿದೆ. ಚರಿತ್ರೆ ರಚನೆಯ ವಿವಿಧ ಆಯಾಮಗಳು, ನವಚಾರಿತ್ರಿಕವಾದ, 1857ರ ಘಟನೆ, ಅಮರಸುಳ್ಯ ಹೋರಾಟ, ಮೈಸೂರ ಚಲೋ ಚಳವಳಿ, ಕಂಟೋನ್ಮೆಂಟ್‌ಗಳು, ಸ್ಥಳೀಯ ಚರಿತ್ರೆ, ಬ್ರಿಟಿಶ್ ಕೃಷಿ ನೀತಿ ಮುಂತಾದವು ಇಲ್ಲಿ ಚರ್ಚಿತಗೊಂಡಿರುವ ವಿಚಾರಗಳು.

**7. ಚರಿತ್ರೆ ಅಧ್ಯಯನ(ಸಂಪುಟ 7, ಸಂಚಿಕೆ 2, ಜನವರಿ–ಜೂನ್, 2012)**
ಚರಿತ್ರೆ ಅಧ್ಯಯನದ ಈ ಸಂಚಿಕೆಯಲ್ಲಿ ನವ ಚಾರಿತ್ರಿಕವಾದ, ರಾಷ್ಟ್ರೀಯತೆ, ಗ್ರಾಮದೇವತೆಗಳು, ಬೇಡ ಹೋರಾಟಗಳು, ದಲಿತ ಚಳವಳಿ, ಮೌಖಿಕತೆ, ತರ್ತು ಪರಿಸ್ಥಿತಿ, ಊಳಿಗಮಾನ್ಯ ಮುಂತಾದ ವಿಷಯಗಳನ್ನು ಒಳಗೊಂಡ ಒಟ್ಟು ಹದಿಮೂರು ಲೇಖನಗಳಿವೆ.

**08. ಏಷ್ಯಾ : ಚರಿತ್ರೆಯ ವಿವಿಧ ಆಯಾಮಗಳು (ಮುದ್ರಣ ಹಂತದಲ್ಲಿದೆ) (2010)**
ಏಷ್ಯಾದ ರಾಷ್ಟ್ರಗಳಲ್ಲಿ ಸಂಸ್ಕೃತಿ ರೂಪುಗೊಂಡ ಬಗೆ ಹಾಗೂ ಆ ರಾಷ್ಟ್ರಗಳು ಜಗತ್ತಿನ ಇತರ ರಾಷ್ಟ್ರಗಳೊಂದಿಗೆ ಹೊಂದಿದ್ದ ಸಂಬಂಧಗಳ ಅಧ್ಯಯನವನ್ನು ಈ ಕೃತಿಯಲ್ಲಿ ಮಾಡಲಾಗಿದೆ. ಮೆಸಪಟೋಮಿಯಾದ ನಾಗರಿಕತೆಯಿಂದ ಪ್ರಾದೇಶಿಕ ಒಕ್ಕೂಟಗಳ ರಚನೆಯವರೆಗೆ ಏಷ್ಯಾದಲ್ಲಾದ ಪ್ರಮುಖ ಬೆಳವಣಿಗೆಗಳ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ. ಪಶ್ಚಿಮ ಏಷ್ಯಾ, ಪೂರ್ವ ಏಷ್ಯಾ ಹಾಗೂ ಆಗ್ನೇಯ ಏಷ್ಯಾದ ದೇಶಗಳಲ್ಲಿ ಸಾಂಸ್ಕೃತಿಕ ಹಾಗೂ ರಾಜಕಾರಣದ ವಿವಿಧ ಆಯಾಮಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಏಷ್ಯಾದ ರಾಷ್ಟ್ರಗಳಲ್ಲಿ ವಸಾಹತುಶಾಹಿ ವಿರುದ್ಧ ನಡೆದ ಹೋರಾಟಗಳು, ಆಂತರಿಕ ಬಿಕ್ಕಟ್ಟುಗಳು, ಇಸ್ರೇಲ್–ಪ್ಯಾಲೇಸ್ತೀನಿ ಸಮಸ್ಯೆಗಳು ಮುಂತಾದ ಜಾಗತಿಕ ಮಹತ್ವವನ್ನು ಪಡೆದುಕೊಂಡ ವಿಚಾರಗಳನ್ನು ಈ ಕೃತಿಯಲ್ಲಿ ಚರ್ಚಿಸಲಾಗಿದೆ.

**09. ಯುರೋಪ್ : ಚರಿತ್ರೆಯ ವಿವಿಧ ಆಯಾಮಗಳು (ಮುದ್ರಣ ಹಂತದಲ್ಲಿದೆ) (2010)**
ಯುರೋಪಿನ ಚರಿತ್ರೆಯ ಆಯಾ ಕಾಲಘಟ್ಟದ ಸಾಮಾಜಿಕ, ಆರ್ಥಿಕತೆ ಹಾಗೂ ರಾಜಕಾರಣದ ನೆಲೆಗಳನ್ನು ಈ ಕೃತಿಯಲ್ಲಿ ವಿವರಿಸಲಾಗಿದೆ. ಯುರೋಪಿನ ಪೂರ್ವೇತಿಹಾಸದಿಂದ ಆಧುನಿಕ ಸಂದರ್ಭದ ಜಾಗತೀಕರಣದವರೆಗಿನ ಬೆಳವಣಿಗೆಗಳನ್ನು ಪ್ರತ್ಯೇಕವಾಗಿ ಇಲ್ಲಿ ವಿಶ್ಲೇಷಿಸಲಾಗಿದೆ. ಸಂಪ್ರದಾಯ ಹಾಗೂ ಆಧುನಿಕತೆಗಳ ಮುಖಾಮುಖಿ, ಕೈಗಾರಿಕಾ ಕ್ರಾಂತಿಯ ನಂತರ ಜಾಗತಿಕ ಮಟ್ಟದಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳಲಾರಂಭಿಸಿದ ಕೈಗಾರಿಕಾ ಅರ್ಥವ್ಯವಸ್ಥೆ, ಬಂಡವಾಳಶಾಹಿ ಹಾಗೂ ಸಮಾಜವಾದಿ ಶಕ್ತಿಗಳ ಮುಖಾಮುಖಿ ಹಾಗೂ ಜಾಗತೀಕರಣದ ಮೂಲಕ ಇಡೀ ಜಗತ್ತನ್ನೇ ಹತ್ತಿರವನ್ನಾಗಿಸುವ ಬಂಡವಾಳಕೇಂದ್ರಿತ ಧೋರಣೆಗಳು ಮುಂತಾದ ಮಹತ್ವದ ವಿಚಾರಗಳನ್ನು ಈ ಕೃತಿಯು ಒಳಗೊಂಡಿದೆ.

**16. ಪ್ರಕಟಿತ ಪ್ರಮುಖ 10 ಲೇಖನಗಳು**

**01. ಪರಿಸರ ಚಳವಳಿಗಳ ಸೈದ್ಧಾಂತಿಕ ನೆಲೆಗಳು, ಹೊಸತು ಸಂಪುಟ–3, ಸಂಚಿಕೆ2, 2001**
ಇಂದು ಜಾಗತಿಕ ಮಟ್ಟದಲ್ಲಿ ಪರಿಸರ ಬಿಕಟ್ಟು ಕಾಣಿಸಿಕೊಂಡಿದ್ದು, ಪ್ರಪಂಚದ ಪ್ರತಿಯೊಂದು ದೇಶವೂ ಈ ಕುರಿತಾಗಿ ಗಂಭೀರ ಚಿಂತನೆ ನಡೆಸುತ್ತಿದೆ. ಪರಿಸರ ಜಾಗತಿಕ ಮಟ್ಟದಲ್ಲಿ ಚರ್ಚೆಯ ವಿಷಯವಾಗಿರುವುದು, ಪರಿಸರದೊಂದಿಗೆ ಮಾನವ ನಿರ್ಮಿತ ಧೋರಣೆಗಳು ಸೇರಿಕೊಂಡಿರುವುದು, ಬಹುರಾಷ್ಟ್ರೀಯ ಕಂಪನಿಗಳು–ಸರ್ಕಾರ–ಮಧ್ಯವರ್ತಿಗಳು ಹಾಗೂ ಸ್ಥಳೀಯ ಮೇಲ್ವರ್ಗಗಳು ನಡೆಸುವ ರಾಜಕೀಯ, ಸರ್ಕಾರಿ ಹಾಗೂ ಬಂಡವಾಳಶಾಹಿ ಪರಿಸರವಾದಿಗಳು ಮುಂತಾದ ಪರಿಸರವನ್ನು ಸಂಕೀರ್ಣಗೊಳಿಸುವ ವಿಚಾರಗಳ ಕುರಿತು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

**02. ದಿ ಎಮರ್ಜೆನ್ಸ್ ಆಫ್ ಟ್ರೇಡಿಂಗ್ ಮಿಡ್ಲ್‌ಮೆನ್ ಇನ್ ಕಲೋನ್ಯಲ್ ಮಂಗಳೂರು – ಇಂಡಿಕಾ, ಸಂಪುಟ 42, ನಂ.2, ಸೆಪ್ಟಂಬರ್ 2005**
ಬ್ರಿಟಿಷ್ ಆಳ್ವಿಕೆಯ ಅವಧಿಯಲ್ಲಿ ವ್ಯಾಪಾರಿ ಮಧ್ಯವರ್ತಿಗಳು ಸ್ಥಳೀಯ ಆರ್ಥಿಕತೆಯ ಮೇಲೆ ಹಿಡಿತ ಸಾಧಿಸಿದ್ದರು. ಬಂದರು ಪಟ್ಟಣವಾದ ಮಂಗಳೂರಿನಲ್ಲಿ ವ್ಯಾಪಾರಿ ಮಧ್ಯವರ್ತಿಗಳಾದ ಕೊಂಕಣಿಗಳು, ಬೊಹ್ರಾಗಳು, ಗುಜರಾತಿಗಳು, ಮುಂತಾದವರು ಹಣಕಾಸಿನ ನೆರವನ್ನು ಒದಗಿಸುವ ಸಂಸ್ಥೆಗಳಾಗಿ, ಪ್ರಭುತ್ವ ಹಾಗೂ ಜನತೆಯ ಮಧ್ಯೆ ಕೊಂಡಿಗಳಾಗಿ, ಶ್ರೀಮಂತ ವರ್ತಕರಾಗಿ ಹಾಗೂ ರೈತರಿಂದ ಭೂಮಿಯನ್ನು ಪಡೆದು ಭೂಮಾಲೀಕರಾಗಿ ಕಾಣಿಸಿಕೊಂಡು ಬ್ರಿಟಿಷ್ ಮಾದರಿಯ ಆಧುನೀಕರಣ ಹಂತ ಹಂತವಾಗಿ ನೆಲೆಕಾಣುವಂತೆ ಮಾಡಿದರು. ಮಧ್ಯವರ್ತಿಗಳು ಅಸ್ತಿತ್ವಕ್ಕೆ ಬಂದ ಬಗೆ, ಅವರ ಕಾರ್ಯ ಚಟುವಟಿಕೆಗಳು ಹಾಗೂ ಸಮಾಜದ ಮೇಲೆ ಬೀರಿದ ಪರಿಣಾಮಗಳ ಕುರಿತು ಈ ಲೇಖನಗಳಲ್ಲಿ ಚರ್ಚಿಸಲಾಗಿದೆ.

**03. ಪೋರ್ಚುಗೀಸ್ ಹೆಜೆಮನಿ ಓವರ್ ಮಂಗಳೂರು– ಪ್ರೊಸೀಡಿಂಗ್ಸ್ ಆಫ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, 64ನೇ ಅಧಿವೇಶನ, ಮೈಸೂರು 2004**
ಬಂದರು ಪಟ್ಟಣವಾದ ಮಂಗಳೂರು ಚಾರಿತ್ರಿಕವಾಗಿ ವ್ಯಾಪಾರ ಕೇಂದ್ರವಾಗಿ ಗುರುತಿಸಿಕೊಂಡು. ಎಲ್ಲ ಅರಸುಮನೆತನಗಳ ಆಕರ್ಷಣೆಯ ಕೇಂದ್ರವಾಗಿತ್ತು, ಪೋರ್ಚುಗೀಸರು ಈ ಪಟ್ಟಣವನ್ನು ವಶಪಡಿಸಿಕೊಳ್ಳಲು ಹಾಗೂ ಈ ಬಂದರಿನ ಮೂಲಕ ಲಾಭದಾಯಕ ವ್ಯಾಪಾರ ನಡೆಸಲು ಹಲವಾರು ಬಾರಿ ಪ್ರಯತ್ನಪಟ್ಟರು. ಪೋರ್ಚುಗೀಸರ ವ್ಯಾಪಾರ ನೀತಿ, ಸ್ಥಳೀಯ ಅರಸುಮನೆತನಗಳೊಂದಿಗೆ ಹೊಂದಿದ್ದ ಸಂಬಂಧಗಳು, ಪೋರ್ಚುಗೀಸರ ಮಂಗಳೂರಿನ ಮೇಲೆ ಉಂಟುಮಾಡಿದ ಪರಿಣಾಮಗಳು ಮುಂತಾದ ಮಹತ್ವದ ವಿಚಾರಗಳನ್ನು ಈ ಲೇಖನವು ಒಳಗೊಂಡಿದೆ.

**04. ಸ್ಮಾರಕಗಳು ಮತ್ತು ಸಾಮಾಜಿಕ ವಾಸ್ತವತೆ–ಚರಿತ್ರೆ ಅಧ್ಯಯನ, ಸಂಪುಟ 1, ಸಂಚಿಕೆ 1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2005**
ಚರಿತ್ರೆ ಅಧ್ಯಯನಕ್ಕೆ ಬಹುಮುಖ್ಯ ಆಕರಗಳಾಗಿರುವ ಸ್ಮಾರಕಗಳ ಸಾಮಾಜಿಕ ನೆಲೆಯ ಅಧ್ಯಯನವನ್ನು ಈ ಲೇಖನದಲ್ಲಿ ಮಾಡಲಾಗಿದೆ. ಅರಸಕೇಂದ್ರಿತ ಚರಿತ್ರೆ ಸ್ಮಾರಕಗಳನ್ನು ವೈಭವೀಕರಿಸುವುದು ಹಾಗೂ ಜನರ ಚರಿತ್ರೆ ಸ್ಮಾರಕಗಳಲ್ಲಿ ತಮ್ಮ ದುಡಿಮೆ, ನೋವು ಹಾಗೂ ಶೋಷಣೆಗಳನ್ನು ಕಾಣುವುದು ಸ್ಮಾರಕಗಳ ಸಾಮಾಜಿಕ ಹಾಗೂ ಆರ್ಥಿಕ ನೆಲೆಗಳ ಅಧ್ಯಯನ ಕೈಗೊಂಡಾಗ ಕಂಡು ಬರುವ ವಾಸ್ತವ ಸಂಗತಿ. ಈ ಲೇಖನದಲ್ಲಿ ಸ್ಮಾರಕಗಳನ್ನು ಪ್ರಭುತ್ವದ ಸ್ಮಾರಕಗಳು, ಪ್ರಭುತ್ವದ ಸ್ಮಾರಕಗಳ ನಿರ್ಮಾಣ ಹಾಗೂ ಪ್ರಜೆಗಳ ಸ್ಮಾರಕಗಳು, ಎನ್ನುವ ಮೂರು ಭಾಗಗಳಲ್ಲಿ ವಿಶ್ಲೇಷಿಸಲಾಗಿದೆ.

**05. ವಿಜಯನಗರ ದೇಶಿ–ವಿದೇಶಿ ಸಂಕಥನ– ಹಂಪಿ : ಅಂದು–ಇಂದು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2006**
ವಿಜಯನಗರ ಕುರಿತು ಬಂದಿರುವ ಸ್ಥಳೀಯ ಹಾಗೂ ವಿದೇಶಿ ಬರಹಗಳನ್ನು ವಿಮರ್ಶಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ. ವಸಾಹತುಶಾಹಿ ಮತ್ತು ರಾಷ್ಟ್ರೀಯವಾದಿ ಅವಶ್ಯಕತೆಗಳ ಹಿನ್ನಲೆಯಲ್ಲಿ ವಿಜಯನಗರದ ಚರಿತ್ರೆಯನ್ನು ನಿರ್ಮಿಸಿರುವುದು ಹಾಗೂ ಅದರ ಫಲವಾಗಿ ಕಾಣಿಸಿಕೊಂಡ ಕೋಮುವಾದಿ ದೃಷ್ಟಿಕೋನದ ಕುರಿತು ಲೇಖನದಲ್ಲಿ ಚರ್ಚಿಸಲಾಗಿದೆ. ರಾಬರ್ಟ್ ಸಿವೆಲ್ ಹಾಗೂ ಬಿ. ಸೂರ್ಯನಾರಾಯಣ ರಾವ್ ಅವರ ಕೃತಿಗಳನ್ನು ವಿಮರ್ಶಿಸಲಾಗಿದೆ. ವಿಜಯನಗರದ ಚರಿತ್ರೆಯನ್ನು ವಿಶಾಲ ಭಾರತದ ರಾಷ್ಟ್ರೀಯತೆಯ ಚೌಕಟ್ಟಿನಲ್ಲಿ ಹಾಗೂ ಪ್ರಾದೇಶಿಕ ರಾಷ್ಟ್ರೀಯತೆಯ ಚೌಕಟ್ಟಿನಲ್ಲಿ ನೋಡಿರುವುದರ ಕುರಿತು ಹಾಗೂ ಕನ್ನಡ–ತೆಲುಗು ಮೂಲದ ಕುರಿತಾಗಿ ನಡೆದಿರುವ ಚರ್ಚೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಬರ್ಟನ್ ಸ್ಟೈನ್ ಹಾಗೂ ನೊಬುರು ಕರಾಶಿಮ ಅವರುಗಳ ಚಿಂತನೆಗಳನ್ನು ಇಲ್ಲಿ ಅಧ್ಯಯನ ನಡೆಸಲಾಗಿದೆ.

**06. ಆರ್. ಜಿ. ಕಾಲಿಂಗ್‌ವುಡ್ ಅವರ ಸಂಶೋಧನೆಯಲ್ಲಿ ಚರಿತ್ರೆ ಮತ್ತು ಚರಿತ್ರೆಕಾರ – ಚರಿತ್ರೆ ಅಧ್ಯಯನ, ಸಂಪುಟ 2, ಸಂಚಿಕೆ 1, ಜುಲೈ – ಡಿಸೆಂಬರ್ 2006**
ಆರ್.ಜಿ. ಕಾಲಿಂಗ್‌ವುಡ್ ಅವರು ತಮ್ಮ 'ದಿ ಐಡಿಯಾ ಆಫ್ ಹಿಸ್ಟರಿ' ಕೃತಿಯಲ್ಲೆ ಚರಿತ್ರೆ ಅಧ್ಯಯನ ವಿಧಾನ ಹಾಗೂ ಲೇಖನದ ಕುರಿತು ವಿಮರ್ಶಾತ್ಮಕವಾದ ಅಧ್ಯಯನವನ್ನು ನಡೆಸಿದ್ದಾರೆ. ಚರಿತ್ರೆ, ಚರಿತ್ರೆಕಾರ ಹಾಗೂ ಘಟನೆಗಳ ಕುರಿತಾದ ಕಾಲಿಂಗಂವುಡ್ ಅವರ ಅಭಿಪ್ರಾಯಗಳನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ. ಚರಿತ್ರೆಯ ಘಟನೆಗಳಲ್ಲಿ ಅಡಕವಾಗಿರುವ ವಿಚಾರಗಳನ್ನು ಚರಿತ್ರೆಕಾರ ಪುನರ್‌ವಿಮರ್ಶೆಗೆ ಒಡ್ಡುವ ವಿಧಾನದ ಕುರಿತಾದ ಕಾಲಿಂಗ್‌ವುಡ್ ಅವರ ಚಿಂತನೆಗಳನ್ನು ಇಲ್ಲಿ ವಿವರಿಸಲಾಗಿದೆ. ಮಾನವನ ಕ್ರಿಯೆಗಳು, ಅವುಗಳನ್ನು ಅರ್ಥೈಸಿಕೊಳ್ಳುವ ಬಗೆ, ಘಟನೆಗಳ ಒಳ ಹಾಗೂ ಹೊರ ವಿಚಾರಗಳು ಹಾಗೂ ಯುರೋಪಿನ ದೇಶಗಳಲ್ಲಿನ ಚರಿತ್ರೆ ಬರವಣಿಗೆಯ ಸ್ವರೂಪದ ಕುರಿತಾಗಿ ಲೇಖನದಲ್ಲಿ ಚರ್ಚಿಸಲಾಗಿದೆ.

**07. ಪರಿಸರ ಸಂರಕ್ಷಣಾ ಚಳವಳಿಗಳು–ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಯೋಜನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ಗ್ಯಾಸೆಟೆಯರ್ ಇಲಾಖೆ, 2007**
ಕರ್ನಾಟಕದಲ್ಲಿ ಪರಿಸರ ಸಂಬಂಧವಾಗಿ ನಡೆದ ಚಳವಳಿಗಳ ಸ್ವರೂಪವನ್ನು ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ. ಕರಾವಳಿ ಕರ್ನಾಟಕ, ಮಲೆನಾಡು, ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ನಡೆದ ಪರಿಸರ ಚಳವಳಿಗಳ ಅಜೆಂಡಾಗಳನ್ನು ಇಲ್ಲಿ ವಿವರಿಸಲಾಗಿದೆ. ಪರಿಸರ ಚಳವಳಿಗಳು ತಮ್ಮ ಸ್ವರೂಪದಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾದ ಒತ್ತಾಯಕ್ಕೆ ಒಳಗಾಗಿರುವ ಸಂದರ್ಭಗಳು, ಸ್ಥಳೀಯ ನಿವಾಸಿಗಳ ಬೇಡಿಕೆ ಈಡೇರದೇ ಇರುವುದಕ್ಕೆ ಕಾರಗಳು, ರಾಜಕಾರಣದ ಪ್ರವೇಶ ಪರಿಸರವನ್ನು ರಾಜಕೀಯಗೊಳಿಸಿ ಸ್ವಾರ್ಥ ರಾಜಕಾರಣದ ನೆಲೆಗೆ ತಂದಿರುವುದು, ಅಭಿವೃದ್ಧಿಯ ಕುರಿತಾದ ತಾಂತ್ರಿಕ ವಿವರಣೆ ಸಾಂಸ್ಕೃತಿಕ ಮೌಲ್ಯಗಳ ಬದಲಾವಣೆಗೆ ಅಡ್ಡಿಯಾಗಿರುವುದು ಮುಂತಾದ ವಿಚಾರಗಳನ್ನು ಈ ಲೇಖನದ'ಲ್ಲಿ ಚರ್ಚಿಸಲಾಗಿದೆ.

**08. ಚರಿತ್ರೆ ಸಂಶೋಧನೆಯಲ್ಲಿ ಸಮಸ್ಯೀಕರಣ ಪ್ರಕ್ರಿಯೆ–ಚರಿತ್ರೆ ಅಧ್ಯಯನ, ಸಂಪುಟ2, ಸಂಚಿಕೆ 2, ಜನವರಿ–ಜೂನ್ 2007**
ಚರಿತ್ರೆ ಸಂಶೋಧನೆಯಲ್ಲಿ ಸಮಸ್ಯೀಕರಣದ ಮಹತ್ವವನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಸಂಶೋಧನೆಯಲ್ಲಿ ಬಹುಮುಖ್ಯವಾದ ವಿಚಾರವೆಂದರೆ ಸಮಸ್ಯೆಯನ್ನು ಗುರುತಿಸುವುದು ಹಾಗೂ ಗುರುತಿಸಿದ ಸಮಸ್ಯೆಯನ್ನು ಸಮಸ್ಯೀಕರಿಸಿ ಪರಿಹಾರಗಳನ್ನು ಕಂಡುಕೊಳ್ಳುವುದು. ಸಮಸ್ಯೀಕರಿಸುವ ವಿಧಾನ, ಸಮಸ್ಯೀಕರಣದ ವಿವಿಧ ಬಗೆಗಳು, ಸಮಸ್ಯೀಕರಣದ ತಾತ್ವಿಕತೆ ಹಾಗೂ ಪ್ರಾಮುಖ್ಯತೆಯ ಕುರಿತು ಈ ಲೇಖನದಲ್ಲಿ ಕೂಲಂಕಷವಾಗಿ ಚರ್ಚಿಸಲಾಗಿದೆ.

**09. ಚರಿತ್ರೆ ಸಂಶೋಧನೆಯಲ್ಲಿ ಆನುಷಂಗಿಕ ಆಕರಗಳು–ಚರಿತ್ರೆ ಅಧ್ಯಯನ, ಸಂಪುಟ3, ಸಂಚಿಕೆ 1, ಜುಲೈ–ಡಿಸೆಂಬರ್ 2007**
ಚರಿತ್ರೆ ಸಂಶೋಧನೆಯಲ್ಲಿ ಆನುಷಂಗಿಕ ಆಕರಗಳ ಮಹತ್ವ, ಸಂಗ್ರಹ ಮಾಡುವ ವಿಧಾನ, ವಿಶ್ಲೇಷಣಾ ಕ್ರಮ, ಎದುರಾಗುವ ಸಮಸ್ಯೆಗಳುಮ ಸಂಶೋಧಕ'ರಿಗೆ ಇರಬೇಕಾದ ಚಾರಿತ್ರಿಕ ದೃಷ್ಟಿಕೋನ, ಆಯ್ಕೆ ಸ್ವಾತಂತ್ರ್ಯ, ಮಿತಿಗಳು ಮುಂತಾದ

ವಿಚಾರಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಆಕರಗಳ ಸಂಗ್ರಹ, ವಿಂಗಡನೆ ಹಾಗೂ ವಿಶ್ಲೇಷಣಾ ವಿಧಾನಗಳಲ್ಲಿ ಆಗಿರುವ ಬದಲಾವಣೆಗಳು ಹಾಗೂ ಈ ಕುರಿತು ಸಂಶೋಧಕರಿಗೆ ಇರಬೇಕಾದ ಖಚಿತತೆ ಹಾಗೂ ಸೈದ್ಧಾಂತಿಕ ಬದ್ಧತೆಗಳ ಕುರಿತು ಲೇಖದಲ್ಲಿ ವಿಮರ್ಶಾತ್ಮಕವಾಗಿ ಅಧ್ಯಯನ ನಡೆಸಲಾಗಿದೆ.

**10. ಚರಿತ್ರೆ : ವರ್ತಮಾನದ ಕಥನ–ಚರಿತ್ರೆ ಅಧ್ಯಯನ, ಸಂಪುಟ 3, ಸಂಚಿಕೆ 2, ಜನವರಿ–ಜೂನ್ 2008**
ಚರಿತ್ರೆ ಸಂಶೋಧಕರಿಗೆ ಚರಿತ್ರೆಯೇ ಒಂದು ವರ್ತಮಾನದ ಕಥನವಾಗಿರುತ್ತದೆ ಎನ್ನುವ ಚರಿತ್ರೆಯ ಬದಲಾದ ವ್ಯಾಖ್ಯಾನವನ್ನು ಈ ಲೆಖನದಲ್ಲಿ ಚರ್ಚಿಸಲಾಗಿದೆ. ಚರಿತ್ರೆಕಾರ ಗತದಲ್ಲಿನ ವರ್ತಮಾನವನ್ನು ಹಾಗೂ ವರ್ತಮಾನದಲ್ಲಿನ ಗತವನ್ನು ಗ್ರಹಿಸಿಕೊಳ್ಳುವ ಸೂಕ್ಷ್ಮತೆಯನ್ನು ಹೊಂದುವುದು ಹಾಗೂ ಅದರ ಮೂಲಕ ಆಗಿಹೋದ ಎನ್ನುವುದಕ್ಕಿಂತ ಆಗುತ್ತಿರುವ ಅಥವಾ ಆಗುಮಾಡಿಸುವ ಎನ್ನುವ ವಿಚಾರಗಳ ಮೂಲಕ ಚರಿತ್ರೆಯನ್ನು ನೋಡುವುದು ಅತ್ಯಂತ ಜರೂರಿನದ್ದು ಎನ್ನುವ ಉದ್ದೇಶ ಈ ಲೇಖನದ್ದು. ಚರಿತ್ರೆಯನ್ನು ಗತದ ಚೌಕಟ್ಟಿನಿಂದ ಹೊರಗೆಳೆದು ವರ್ತಮಾನದ ಬೆಳಕಿನಲ್ಲಿ ನೋಡಿದಾಗ ಮಾತ್ರ ಚರಿತ್ರೆ ನಮ್ಮದಾಗಲು ಸಾಧ್ಯ ಎನ್ನುವ ವಿಚಾರವನ್ನು ಇಲ್ಲಿ ಚರ್ಚಿಸಲಾಗಿದೆ. ವರ್ತಮಾನದ ಸ್ಪಂದನೆ ಇದ್ದಾಗ ಮಾತ್ರ ಚರಿತ್ರೆ ಜೀವಂತಿಕೆಯಿಂದ ಕೂಡಿರಲು ಸಾಧ್ಯ ಹಾಗೂ ವರ್ತಮಾನವನ್ನು ಗ್ರಹಿಸುವ ಮನಸ್ಸು ಇದ್ದಾಗ ಮಾತ್ರ ಚರಿತ್ರೆ ವರ್ತಮಾನದ ಕಥನವಾಗಿ ಕಂಡುಬರಲು ಸಾಧ್ಯ ಎನ್ನುವ ವಿಚಾರವನ್ನು ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

**17. ಪಿಎಚ್.ಡಿ ಮಾರ್ಗದರ್ಶನ**
**ಅಭ್ಯರ್ಥಿಗಳು, ಶೀರ್ಷಿಕೆ, ಪದವಿ, ಘೋಷಿಸಿದ ದಿನಾಂಕ**
**01. ಸಿದ್ಧಲಿಂಗಯ್ಯ., ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು, ಪ್ರಗತಿಯಲ್ಲಿದೆ, (ನೋಂದಣಿ ವರ್ಷ) 2006**
ಉತ್ತರ ಕನ್ನಡ ಜಿಲ್ಲೆಯಲ್ಲಿ ವಸಾಹತುಶಾಹಿ ಸಂದರ್ಭದಿಂದ ಇಂದಿನ ಸಮಕಾಲೀನ ಸಂದರ್ಭದವರೆಗೆ ನಡೆದ ಪರಿಸರ ಚಳವಳಿಗಳ ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ಅಧ್ಯಯನವನ್ನು ಈ ಮಹಾಪ್ರಬಂಧದಲ್ಲಿ ಮಾಡಲಾಗುತ್ತಿದೆ. ಪರಿಸರ ಚಳವಳಿಗಳ ಹಿನ್ನೆಲೆ, ಸ್ವರೂಪ ಹಾಗೂ ಸೈದ್ಧಾಂತಿಕತೆ, ನೆಲಸಂಬಂಧಿ ಹಾಗೂ ಜಲಸಂಬಂಧಿ ಚಳವಳಿಗಳು ಎಂಬುದಾಗಿ ವಿಂಗಡಿಸಿಕೊಂಡು ಅಧ್ಯಯನವನ್ನು ರೂಪಿಸಲಾಗಿದೆ.

**02. ಕೆ.ಎಸ್. ವಿಶ್ವನಾಥ., ಟಿಪ್ಪು ಸುಲ್ತಾನ್ ಹಾಗೂ ಫ್ರೆಂಚರು: ಮಿಲಿಟರಿ ಹಾಗೂ ರಾಜಕಾರಣ ನೆಲೆಯ ಅಧ್ಯಯನ, ಪ್ರಗತಿಯಲ್ಲಿದೆ, 2009**
ಟಿಪ್ಪು ಸುಲ್ತಾನ್ ಫ್ರೆಂಚರ ನೆರವನ್ನು ಯಾಚಿಸಿದುದರ ಹಿಂದಿನ ಉದ್ದೇಶಗಳನ್ನು ಅರ್ಥೈಸಿಕೊಳ್ಳುವುದು ಹಾಗೂ ಆ ಮೂಲಕ ಟಿಪ್ಪು ಬ್ರಿಟಿಷ್ ವಿರೋಧಿ ನಿಲುವನ್ನು ಪ್ರಕಟಿಸಿದ ಬಗೆಯನ್ನು ವಿಶ್ಲೇಷಿಸುವುದು ಈ ಮಹಾಪ್ರಬಂಧದ ಮುಖ್ಯ ಉದ್ದೇಶವಾಗಿದೆ. ಫ್ರೆಂಚ್ ವಸಾಹತುನೀತಿ, ಟಿಪ್ಪು ಸುಲ್ತಾನನ ಹೊಸ ಆವಿಷ್ಕಾರಗಳು, ಹೊರಜಗತ್ತಿನೊಂದಿಗಿನ ಸಂಪರ್ಕ, ಫ್ರೆಂಚರೊಂದಿಗಿನ ರಾಜಕೀಯ ಹಾಗೂ ಮಿಲಿಟರಿ ಸಂಬಂಧಗಳು ಮುಂತಾದ ಮಹತ್ವದ ವಿಚಾರಗಳನ್ನು ಈ ಮಹಾಪ್ರಬಂಧವು ಒಳಗೊಂಡಿದೆ.

**03. ಗಂಗಮ್ಮ ಎಂ.ಎಚ್., ದಖನ್ನಿನ ಬಹಮನಿ ರಾಜ್ಯ: ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯ ಅಧ್ಯಯನ, ಪ್ರಗತಿಯಲ್ಲಿದೆ 2009**
ಮಧ್ಯಕಾಲೀನ ಸಂದರ್ಭದ ಭಾರತದ ಚರಿತ್ರೆಯನ್ನು ಅವಲೋಕಿಸುವಾಗ ದಖನ್ನಿನ ಬಹಮನಿ ರಾಜ್ಯ ಪ್ರಮುಖವಾಗಿ ಗುರುತಿಸಿಕೊಳ್ಳುತ್ತದೆ. ಈ ರಾಜ್ಯದ ಹುಟ್ಟು, ಬೆಳವಣಿಗೆ ಹಾಗೂ ಅವನತಿ, ಬಹಮನಿ ಕಾಲದ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆ, ಬಹಮನಿ ಹಾಗೂ ವಿಜಯನಗರಗಳ ನಡುವಿನ ಸಾಮಾಜಿಕ ಹಾಗೂ ಆರ್ಥಿಕ ಸಂಬಂಧಗಳು, ಈ ಕುರಿತಾಗಿ ಬಂದಿರುವ ಚರಿತ್ರೆ ಬರವಣಿಗೆಗಳು ಮುಂತಾದ ವಿಚಾರಗಳನ್ನು ಈ ಮಹಾಪ್ರಬಂಧದಲ್ಲಿ ಅಧ್ಯಯನ ನಡೆಸಲಾಗುತ್ತಿದೆ.

**04. ಎಸ್. ಮುನಿರಾಜ್., ವಸಾಹತು ಕರ್ನಾಟಕದ ಕಂಟೋನ್ಮೆಂಟ್‌ಗಳು: ಸಾಮಾಜಿಕ, ಆರ್ಥಿಕ ಹಾಗೂ ಮಿಲಿಟರಿ ನೆಲೆಗಳ ಅಧ್ಯಯನ, ಪ್ರಗತಿಯಲ್ಲಿದೆ, 2010**
ವಸಾಹತು ಕರ್ನಾಟಕದ ಮಿಲಿಟರಿ ವ್ಯವಸ್ಥೆ, ಮಿಲಿಟರಿ ನೀತಿ ಹಾಗೂ ಸೈನಿಕ ನೆಲೆಗಳು ಕುರಿತಾಗಿ ಈ ಮಹಾಪ್ರಬಂಧದಲ್ಲಿ ಚರ್ಚಿಸಲಾಗುವುದು ಕಂಟೋನ್ಮೆಂಟ್ ಪದದ ಅರ್ಥ, ಕಂಟೋನ್ಮೆಂಟ್‌ಗಳ ಆಡಳಿತ, ನಗರಾಭಿವೃದ್ಧಿ, ಕಂಟೋನ್ಮೆಂಟ್‌ಗಳ ರಚನೆ ಹಾಗೂ ವಿನ್ಯಾಸ, ಆರ್ಥಿಕ ಹಾಗೂ ಸಾಮಾಜಿಕ ಜೀವನ ಮುಂತಾದ ವಿಷಯಗಳನ್ನು ಮಹಾಪ್ರಬಂಧವು ಒಳಗೊಂಡಿದೆ.

**05. ಪಿ. ಯಶೋಧ., ಬೆಂಗಳೂರಿನ ವರ್ತಕ ಸಮುದಾಯಗಳು: ವಸಾಹತು ಕಾಲಘಟ್ಟದ ಅಧ್ಯಯನ, ಪ್ರಗತಿಯಲ್ಲಿದೆ, 2010**
ವಸಾಹತುಶಾಹಿ ಆಳ್ವಿಕೆಯ ಸಂದರ್ಭದ ಆರ್ಥಿಕ ನೀತಿಯ ಸ್ವರೂಪವನ್ನು ಅರ್ಥೈಸಿಕೊಳ್ಳುವುದು ಈ ಮಹಾಪ್ರಬಂಧದ ಉದ್ದೇಶವಾಗಿದೆ. ಬೆಂಗಳೂರು ನಗರ ವಸಾಹತುಶಾಹಿ ಆಳ್ವಿಕೆಯಲ್ಲಿ ಬೆಳವಣಿಗೆ ಹೊಂದಿದ ರೀತಿ, ಅಲ್ಲಿನ ವ್ಯಾಪಾರ–

ವಾಣಿಜ್ಯ, ವರ್ತಕರು, ವರ್ತಕ ಸಂಘಗಳು, ವಾಣಿಜ್ಯ ಮಂಡಳಿಗಳು, ನಗರ–ಉಪನಗರಗಳ ಬೆಳವಣಿಗೆ ಮುಂತಾದ ವ್ಯಾಪಾರ ಹಾಗೂ ನಗರಕೇಂದ್ರಿತ ವಿಚಾರಗಳನ್ನು ಈ ಮಹಾಪ್ರಬಂಧದಲ್ಲಿ ಚರ್ಚಿಸಲಾಗುವುದು.

**06. ತಿಪ್ಪಣ್ಣ., ನಿಜಾಮ್ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಗಳು: ಚಾರಿತ್ರಿಕ ವಿಶ್ಲೇಷಣೆ, ಪ್ರಗತಿಯಲ್ಲಿದೆ, 2013**
ನಿಜಾಮ್ ಆಳ್ವಿಕೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಗಳು ಗುರುತಿಸಿಕೊಂಡ ಬಗ್ಗೆ, ಅಲ್ಲಿನ ಭೌಗೋಳಿಕತೆ, ಚಾರಿತ್ರಿಕತೆ, ಆಡಳಿತ, ಸಮಾಜ ಹಾಗೂ ಆರ್ಥಿಕತೆ ಕುರಿತಾದ ಮಹತ್ವದ ಬೆಳವಣಿಗೆಗಳನ್ನು ಚಿತ್ರಿಸುವುದು ಹಾಗೂ ಅಭಿವೃದ್ಧಿ–ಅನಭಿವೃದ್ಧಿ ಕೇಂದ್ರಿತ ನಿರೂಪಣೆಗಳನ್ನು ವಿಶ್ಲೇಷಿಸುವುದು ಮಹಾಪ್ರಬಂಧದ ಉದ್ದೇಶವಾಗಿದೆ.

**18. ಎಂ.ಫಿಲ್ ಮಾರ್ಗದರ್ಶನ**

**ಅಭ್ಯರ್ಥಿಗಳು, ಶೀರ್ಷಿಕೆ, ಪದವಿಘೋಷಿಸಿದ ದಿನಾಂಕ**

**1. ನಲ್ಲಾರಡ್ಡಿ., ದೇವದುರ್ಗ ತಾಲೂಕಿನ ಹಗಲುವೇಷಗಾರರು: ಸಬಾಲ್ಟರ್ನ್ ಅಧ್ಯಯನದ ಹಿನ್ನೆಲೆಯಲ್ಲಿ, 2004**
ಅಲೆಮಾರಿ ಸಮುದಾಯಕ್ಕೆ ಸೇರಿದ ಹಗಲುವೇಷಗಾರರು ಸಮಾಜದಲ್ಲಿ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾದವರು. ಅದೇ ರೀತಿ ಚರಿತ್ರೆಯಲ್ಲೂ ಇವರು ದಾಖಲುಗೊಂಡಿಲ್ಲ. ಈ ನಿಬಂಧವು ಹಗಲುವೇಷಗಾರರ ಮೂಲ ಮತ್ತು ವಲಸೆ, ಸಾಮಾಜಿಕ ಸ್ಥಿತಿಗತಿ ಹಾಗೂ ಆರ್ಥಿಕ ಬದುಕಿನ ಕುರಿತು ಅಧ್ಯಯನ ನಡೆಸಿದೆ. ಪ್ರಾದೇಶಿಕವಾಗಿ ಬಹುರೂಪಿಗಳು, ಜಾತಿಗಾರರು, ಬಿಂಗೇರರು, ವೇಷಗಾರರು ಎಂಬುದಾಗಿ ಗುರುತಿಸಿಕೊಂಡ ಈ ಸಮುದಾಯದ ಚರಿತ್ರೆಯನ್ನು ಸಬಾಲ್ಟರ್ನ್ ಅಧ್ಯಯನದ ಹಿನ್ನೆಲೆಯಲ್ಲಿ ನಿರ್ಮಿಸುವ ಪ್ರಯತ್ನವನ್ನು ಈ ನಿಬಂಧದಲ್ಲಿ ಮಾಡಲಾಗಿದೆ.

**02. ಹೊಳಿಬಸಪ್ಪ., ದಾವಣಗೆರೆ ಜಿಲ್ಲೆಯ ಸ್ವದೇಶಿ ಚಳವಳಿ, 2005**
ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ನಡೆದ ಸ್ವದೇಶಿ ಚಳವಳಿಯ ಸ್ವರೂಪವನ್ನು ಈ ನಿಬಂಧದಲ್ಲಿ ಚರ್ಚಿಸಲಾಗಿದೆ. ಸ್ವದೇಶಿ ಮತ್ತು ವಿದೇಶಿ ಎನ್ನುವ ವಿಚಾರವನ್ನು ಪರಿಕಲ್ಪನಾತ್ಮಕ ಚೌಕಟ್ಟಿನಲ್ಲಿ ವ್ಯಾಖ್ಯಾನಿಸಲಾಗಿದೆ. ಸ್ವದೇಶಿ ಚಳವಳಿಯ ವಿವಿಧ ಹಂತಗಳನ್ನು ಗುರುತಿಸಿ ವಿಶ್ಲೇಷಿಸಲಾಗಿದೆ. ಗಾಂಧೀಜಿಯವರು ದಾವಣಗೆರೆಗೆ ಭೇಟಿ ನೀಡಿದ ನಂತರ ಸ್ವದೇಶಿ ಚಳವಳಿ ಪಡೆದುಕೊಂಡ ತಿರುವು ಹಾಗೂ ಸ್ಥಳೀಯವಾಗಿ ಸ್ವದೇಶಿ ಚಳವಳಿಯಲ್ಲಿ ಪಾಲ್ಗೊಂಡ ನಾಯಕರ ಹೋರಾಟದ ವಿಧಾನವನ್ನು ಈ ನಿಬಂಧದಲ್ಲಿ ಚರ್ಚಿಸಲಾಗಿದೆ. ದಾವಣಗೆರೆಯಲ್ಲಿ ವಾಣಿಜ್ಯ ಬೆಳೆಯಾದ ಹತ್ತಿ ಹಾಗೂ ಅದಕ್ಕೆ ಸಂಬಂಧಿಸಿದ ಮಿಲ್‌ಗಳು ಪಡೆದುಕೊಂಡ ಪ್ರಾಮುಖ್ಯತೆ ಹಾಗೂ ಅದು ಸ್ಥಳೀಯ ಆರ್ಥಿಕತೆಯ ಮೇಲೆ ಬೀರಿದ ಪರಿಣಾಮಗಳನ್ನು ಅಧ್ಯಯನ ನಡೆಸಲಾಗಿದೆ.

**03. ಕೆ.ಎಸ್. ವಿಶ್ವನಾಥ., ಚರಿತ್ರೆಲೇಖನಶಾಸ್ತ್ರ: ತುಮಕೂರು ಪ್ರದೇಶದ ಅಧ್ಯಯನ, 2007**
ತುಮಕೂರು ಪ್ರದೇಶಕ್ಕೆ ಸಂಬಂಧಪಟ್ಟಂತೆ ಬಂದಿರುವ ಚರಿತ್ರೆ ಕೃತಿ ಹಾಗೂ ಲೇಖನಗಳನ್ನು ಅಧ್ಯಯನ ನಡೆಸುವುದು ಈ ನಿಬಂಧದ ಉದ್ದೇಶ. ಚರಿತ್ರೆ ಬರವಣಿಗೆಯ ವಿವಿಧ ಮಾದರಿಗಳ ಕುರಿತು ಇಲ್ಲಿ ಚರ್ಚೆ ನಡೆಸಲಾಗಿದೆ. ವಸಾಹತುಪೂರ್ವ, ವಸಾಹತುಕಾಲ, ವಸಾಹತೋತ್ತರ ಅವಧಿಗಳಲ್ಲಿ ರಚನೆಗೊಂಡಿರುವ ಕೃತಿಗಳ ಅವಲೋಕನವನ್ನು ಇಲ್ಲಿ ನಡೆಸಲಾಗಿದೆ. ಚರಿತ್ರೆಕಾರರ ದೃಷ್ಟಿಕೋನ ಹಾಗೂ ಸೈದ್ಧಾಂತಿಕ ನಿಲುವುಗಳ ಬಗೆಗೂ ಇಲ್ಲಿ ಚರ್ಚೆ ಬೆಳೆಸಲಾಗಿದೆ.

**04. ಆರ್. ಲೋಹಿತ್‌ಕುಮಾರ್., ಬಳ್ಳಾರಿ ಜಿಲ್ಲೆಯ ಕ್ರೈಸ್ತ ಮಿಷನರಿಗಳು: ಚಾರಿತ್ರಿಕ ಅಧ್ಯಯನ, 2007**
ಬಳ್ಳಾರಿ ಜಿಲ್ಲೆಯಲ್ಲಿ ಕ್ರೈಸ್ತ ಮಿಷನರಿಗಳು ನಡೆಸಿದ ಕೆಲಸಕಾರ್ಯಗಳ ಚಾರಿತ್ರಿಕ ಅಧ್ಯಯನವನ್ನು ಈ ನಿಬಂಧದಲ್ಲಿ ಮಾಡಲಾಗಿದೆ. ಬಳ್ಳಾರಿ ಜಿಲ್ಲೆಯ ಕ್ರೈಸ್ತ ಮಿಷನರಿಗಳು ಶಿಕ್ಷಣ, ಮುದ್ರಣ, ಮತಾಂತರ, ಸಾಹಿತ್ಯ, ಕೈಗಾರಿಕೆ ಮತ್ತು ವೃತ್ತಿ ತರಬೇತಿ, ಹಾಗೂ ವೈದ್ಯಕೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರ ವಿಮರ್ಶಾತ್ಮಕ ಅಧ್ಯಯನವನ್ನು ನಡೆಸಲಾಗಿದೆ. ಮಿಷನರಿಗಳ ಕಾರ್ಯಚಟುವಟಿಕೆಗಳು ಸ್ಥಳೀಯ ಸಮಾಜ ಹಾಗೂ ಆರ್ಥಿಕತೆಯ ಮೇಲೆ ಬೀರಿದ ಪರಿಣಾಮಗಳ ಕುರಿತೂ ಚರ್ಚಿಸಲಾಗಿದೆ.

**05. ಎಲ್. ಶ್ರೀನಿವಾಸ, ತುಮಕೂರು ಜಿಲ್ಲೆಯಲ್ಲಿ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳು, 2007**
ತುಮಕೂರು ಜಿಲ್ಲೆಯಲ್ಲಿ ನಡೆದ ಗಾಂಧೀಜೀಯವರ ರಚನಾತ್ಮಕ ಕಾರ್ಯಕ್ರಮಗಳ ವಿವಿಧ ಮಜಲುಗಳನ್ನು ಈ ನಿಬಂಧದಲ್ಲಿ ಗುರುತಿಸಲಾಗಿದೆ. ಗಾಂಧೀಜಿಯವರು ತಮ್ಮ ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಬ್ರಿಟಿಷ್ ಸರ್ಕಾರದ ವಿರುದ್ಧ ರೂಪಿಸಿದ ಸ್ವಾತಂತ್ರ್ಯ ಹೋರಾಟದ ಸ್ವರೂಪವನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ. ಸ್ವದೇಶಿ ಚಳವಳಿ, ಅಸ್ಪೃಶ್ಯತಾ ನಿವಾರಣೆ, ಹರಿಜನೋದ್ಧಾರ ಚಳವಳಿ, ಪಾನ ನಿರೋಧ ಚಳವಳಿ, ಹಿಂದಿ ಪ್ರಚಾರ ಆಂದೋಲನ, ಗ್ರಾಮೀಣಾಭಿವೃದ್ಧಿ ಮತ್ತು ಸರ್ವೋದಯ ಮುಂತಾದ ಬ್ರಿಟಿಷ್ ವಿರೋಧಿ ನೀತಿ ಹಾಗೂ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಯ ಪ್ರಯತ್ನಗಳನ್ನು ನಿಬಂಧದ ಅಧ್ಯಾಯಗಳು ಕೂಲಂಕಷವಾಗಿ ಚರ್ಚಿಸಿವೆ.

**06. ಹೆಚ್.ಬಿ. ಸಂತೋಷಕುಮಾರ್., ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧದ ಮುಂಡರಗಿ ಹೋರಾಟ, 2008**
ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ಮುಂಡರಗಿಯ ಭೀಮರಾಯ ನಡೆಸಿದ ಹೋರಾಟದ ಹೆಜ್ಜೆಗಳನ್ನು ಗುರುತಿಸಿ ವಿಶ್ಲೇಷಿಸುವ ಪ್ರಯತ್ನವನ್ನು ಈ ನಿಬಂಧದಲ್ಲಿ ಮಾಡಲಾಗಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿ ನೀತಿಯನ್ನು ವಿಮರ್ಶಿಸುವ ಪ್ರಯತ್ನವನ್ನೂ ಇಲ್ಲಿ ಮಾಡಲಾಗಿದೆ. 1857ರ ಘಟನೆಯ ಕುರಿತ ಸೈದ್ಧಾಂತಿಕ ನಿಲುವುಗಳನ್ನು ಹಾಗೂ ಈ ಹೋರಾಟ ಭಾರತ ಹಾಗೂ ಕರ್ನಾಟಕದಲ್ಲಿ ನಡೆದ ಬಗೆಗಳನ್ನು ವಿವರಿಸಲಾಗಿದೆ. ಮುಂಡರಗಿ ಭೀಮರಾಯನ ಜೀವನ ಹಾಗೂ ಹೋರಾಟದ ಗತಿಯನ್ನು ಲಿಖಿತ ಹಾಗೂ ಮೌಖಿಕ ಆಕರಗಳ ಮೂಲಕ ಅರ್ಥೈಸಿಕೊಂಡು ವಿಶ್ಲೇಷಿಸಲಾಗಿದೆ.

**07. ರಾಕೇಶ್ ಹೆಚ್.ಎಸ್., ಮೈಸೂರು ಚಲೋ ಚಳವಳಿ, 2008**
ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ರಾಜಪ್ರಭುತ್ವವನ್ನು ಪ್ರಶ್ನಿಸಿ ಮೈಸೂರು ಚಲೋ ಚಳವಳಿ ನಡೆಯಿತು. ಇದೊಂದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜಾರಿಗೆ ತರಲು ನಡೆಸಿದ ಪ್ರಜಾ ಚಳವಳಿ, ಮೈಸೂರನ್ನು ಮಾದರಿ ಸಂಸ್ಥಾನ ಎಂಬುದಾಗಿ ಕರೆದುದರ ಹಿಂದಿನ ಧೋರಣೆಗಳನ್ನು ನಿಬಂಧದಲ್ಲಿ ಚರ್ಚಿಸಲಾಗಿದೆ. ಪ್ರಜಾಪ್ರತಿನಿಧಿ ಸಭೆಯ ರಚನೆ ಹಾಗೂ ಅದರ ಸಾಧನೆಗಳ ಕುರಿತು ಇಲ್ಲಿ ಅಧ್ಯಯನ ನಡೆಸಲಾಗಿದೆ. ಮೈಸೂರು ಚಲೋ ಚಳವಳಿಯ ಆರಂಭ, ಹರಡುವಿಕೆ ಹಾಗೂ ಪರಿಣಾಮಗಳನ್ನು ವಿವರಿಸಲಾಗಿದೆ. ಜವಾಬ್ದಾರಿ ಸರ್ಕಾರ ಸ್ಥಾಪನೆಯಲ್ಲಿ ಕೆ.ಸಿ.ರೆಡ್ಡಿಯವರ ಪಾತ್ರದ ಕುರಿತಾಗಿಯೂ ನಿಬಂಧವು ಚರ್ಚಿಸುತ್ತದೆ.

**08. ಎಸ್.ಮುನಿರಾಜ್., ಮೈಸೂರು ಸುಲ್ತಾನರ ಆಳ್ವಿಕೆಯಲ್ಲಿ ಬೆಂಗಳೂರು, 2009**
ಮೈಸೂರು ಸುಲ್ತಾನರ ಆಳ್ವಿಕೆಯ ಅವಧಿಯಲ್ಲಿ ಬೆಂಗಳೂರು ರಾಜಕೀಯ ಹಾಗೂ ಆರ್ಥಿಕ ಕೇಂದ್ರವಾಗಿ ಬೆಳವಣಿಗೆ ಹೊಂದಿದ ಬಗೆಯನ್ನು ಈ ನಿಬಂಧದಲ್ಲಿ ಅಧ್ಯಯನ ನಡೆಸಲಾಗಿದೆ. ರಾಜಕೀಯ ಕೇಂದ್ರವಾಗಿ ಬೆಂಗಳೂರು ಎನ್ನುವ ಅಧ್ಯಾಯದಲ್ಲಿ ಟಿಪ್ಪು ಅರಮನೆ, ಕೋಟೆಗಳ ನಿರ್ಮಾಣ, ಮದ್ದುಗುಂಡು ಸಂಗ್ರಹಾಲಯ, ಕಾವಲು ಪಡೆ ನೇಮಕ ಮುಂತಾದ ವಿಚಾರಗಳನ್ನು ಚರ್ಚಿಸಲಾಗಿದೆ. ಆರ್ಥಿಕ ಕೇಂದ್ರವಾಗಿ ಬೆಂಗಳೂರು ಅಧ್ಯಾಯವು ಕೃಷಿ ಹಾಗೂ ನಗರ ವ್ಯವಸ್ಥೆಗಳ ಬಗೆಗೆ ಚರ್ಚಿಸುತ್ತದೆ. ಬೆಂಗಳೂರು ಮಹಾನಗರವಾಗಿ ಬೆಳೆಯುವುದರಲ್ಲಿ ಮೈಸೂರು ಸುಲ್ತಾನರ ಪಾತ್ರವೂ ಮಹತ್ವದ್ದು. ಈ ವಿಚಾರವನ್ನು ನಿಬಂಧದಲ್ಲಿ ಪ್ರಧಾನವಾಗಿ ಚರ್ಚಿಸಲಾಗಿದೆ.

**09. ಬಿ. ಅನುಪಮ., ಹೊಸಪೇಟೆ ನಗರದ ವರ್ತಕ ಸಮುದಾಯಗಳು: ಚಾರಿತ್ರಿಕ ಅಧ್ಯಯನ, 2009**
ಹೊಸಪೇಟೆಯು ನಗರ ಪ್ರದೇಶವಾಗಿ ಅಭಿವೃದ್ಧಿಗೊಳ್ಳುವುದಕ್ಕೆ ಇಲ್ಲಿನ ವರ್ತಕ ಸಮುದಾಯಗಳು ಮೂಲ ಕಾರಣ. ನಿಬಂಧದಲ್ಲಿ ಹೊಸಪೇಟೆಯ ಪ್ರಮುಖ ವರ್ತಕ ಸಮುದಾಯಗಳಾದ ಗುಜರಾತಿಗಳು, ರಾಜಸ್ಥಾನಿಗಳು, ಶೆಟ್ಟಿಗಳು, ಕೊಂಕಣಿಗಳು ಮುಂತಾದವರ ವ್ಯಾಪಾರ–ವಾಣಿಜ್ಯದ ಕುರಿತು ಚರ್ಚಿಸಲಾಗಿದೆ. ಚಾರಿತ್ರಿಕವಾಗಿ ಆಯಾ ಸಂದರ್ಭದ ಪ್ರಭುತ್ವದೊಂದಿಗೆ ವರ್ತಕ ಸಮುದಾಯಗಳು ಹೊಂದಿದ್ದ ಸಂಬಂಧಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಈ ಸಮುದಾಯಗಳು ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ನೀಡಿದ ಕೊಡುಗೆಗಳು ಹಾಗೂ ಎದುರಿಸುತ್ತಿರುವ ಬಿಕ್ಕಟ್ಟುಗಳ ಕುರಿತಾಗಿಯೂ ನಿಬಂಧದಲ್ಲಿ ಚರ್ಚಿಸಲಾಗಿದೆ.

**10. ಮಹದೇವಪ್ಪ., ದಾವಣಗೆರೆ ಪ್ರದೇಶದ ರೈತ ಹೋರಾಟಗಳು, 2010**
ದಾವಣಗೆರೆ ಪ್ರದೇಶದಲ್ಲಿ ಸ್ವಾತಂತ್ರ್ಯ ಹೋರಾಟದ ಹಾಗೂ ಸ್ವಾತಂತ್ರ್ಯೋತ್ತರ ಅವಧಿಗಳಲ್ಲಿ ನಡೆದ ರೈತ ಚಳವಳಿಗಳ ಅಧ್ಯಯನವನ್ನು ನಡೆಸಲಾಗಿದೆ. ದಾವಣಗೆರೆಯಲ್ಲಿ ವಾಣಿಜ್ಯ ಬೆಳೆಗಳು ಪ್ರಾಮುಖ್ಯತೆ ಪಡೆದುಕೊಂಡಿರುವುದು, ಈ ಪ್ರದೇಶ ಮ್ಯಾಂಚೆಸ್ಟರ್ ನಗರ ಎಂಬುದಾಗಿ ಗುರುತಿಸಿಕೊಂಡಿರುವುದು, ಮಿಲ್‌ಗಳ ಸ್ಥಾಪನೆ, ಕೈಗಾರಿಕೀಕರಣ ಪ್ರಕ್ರಿಯೆ ಸ್ಥಳೀಯ ಕೃಷಿ ಹಾಗೂ ಕೃಷಿ ಸಮಾಜದ ಮೇಲೆ ಬೀರಿದ ಪರಿಣಾಮಗಳು ಹಾಗೂ ರೈತ ಚಳವಳಿಗಳ ಯಶಸ್ಸು ಹಾಗೂ ವಿಫಲತೆ ಇವುಗಳ ಬಗ್ಗೆ ನಿಬಂಧದಲ್ಲಿ ಚರ್ಚಿಸಲಾಗಿದೆ.

**11. ಸಂತೋಷಕುಮಾರ್., ಚಾಂದ್ ಬೀಬಿ: ಒಂದು ಚಾರಿತ್ರಿಕೆ ಅಧ್ಯಯನ, 2010**
ಕರ್ನಾಟಕದ ಚರಿತ್ರೆಯಲ್ಲಿ ವಿಶೇಷವಾದ ಸ್ಥಾನವನ್ನು ಪಡೆದುಕೊಂಡಿರುವ ಚಾಂದ್ ಬೀಬಿಯ ಜೀವನ ಹಾಗೂ ಸಾಧನೆಗಳನ್ನು ಈ ನಿಬಂಧದಲ್ಲಿ ಚರ್ಚಿಸಲಾಗಿದೆ. ಚಾಂದ್ ಬೀಬಿ ಬಿಜಾಪುರದಲ್ಲಿ ಅಧಿಕಾರವನ್ನು ಪಡೆದಿರುವುದು, ಆಂತರಿಕ ವಿರೋಧಗಳನ್ನು ಎದುರಿಸಿರುವುದು, ಮೊಗಲರಿಗೆ ಮುಖಾಮುಖಿಯಾಗಿರುವುದು ಹಾಗೂ ತನ್ನ ಆಡಳಿತಾವಧಿಯಲ್ಲಿ ಮಾಡಿದ ಸಾಧನೆಗಳನ್ನು ಈ ನಿಬಂಧವು ಚರ್ಚಿಸುತ್ತದೆ.

**12. ವೆಂಕಟೇಶ ಕೆ., ಸಿರುಗುಪ್ಪ ಪರಿಸರದ ಭತ್ತದ ಕೃಷಿ ಹಾಗೂ ವ್ಯಾಪಾರ: ಚಾರಿತ್ರಿಕ ಅಧ್ಯಯನ, 2011**

**ಭತ್ತದ ಕಣಜ** ಎಂಬುದಾಗಿಯೇ ಪ್ರಸಿದ್ಧಿಯಾಗಿರುವ ಸಿರುಗುಪ್ಪ ಪ್ರದೇಶದ ಭತ್ತದ ಕೃಷಿ, ಭತ್ತದ ವ್ಯಾಪಾರ, ಭತ್ತದ ವರ್ತಕ ಸಮುದಾಯಗಳು, ಭತ್ತದ ಸಂಘಟನೆಗಳು, ಮಾರುಕಟ್ಟೆಗಳು, ಗಿರಣಿಗಳು ಮುಂತಾದ ವಿಚಾರಗಳನ್ನು ಈ ನಿಬಂಧದಲ್ಲಿ ಚರ್ಚಿಸಲಾಗಿದೆ.

**13. ತಿಪ್ಪಣ್ಣ., ಹೈದರಾಬಾದ್ ಸಂಸ್ಥಾನದಲ್ಲಿ ದಿವಾನರಾಗಿ ಸರ್ ಮಿರ್ಜಾ ಎಂ ಇಸ್ಮಾಯಿಲ್, 2012**

ಹೈದರಾಬಾದ್ ಸಂಸ್ಥಾನದಲ್ಲಿ ಸರ್ ಮಿರ್ಜಾ ಎಂ ಇಸ್ಮಾಯಿಲ್ ಅವರು ದಿವಾನರಾಗಿ ಅಧಿಕಾರ ವಹಿಸಿಕೊಂಡ ಮೇಲೆ ಆದ ಅಭಿವೃದ್ಧಿ ಕಾರ್ಯಗಳನ್ನು ಈ ನಿಬಂಧದಲ್ಲಿ ಚರ್ಚಿಸಲಾಗಿದೆ. ಇಸ್ಮಾಯಿಲ್ ಅವರು ಅಧಿಕಾರ ವಹಿಸಿಕೊಂಡಿರುವುದು ಸ್ಥಳೀಯವಾಗಿ ಭಿನ್ನಾಭಿಪ್ರಾಯಗಳ ಹುಟ್ಟಿಗೆ ಕಾರಣವಾಗುವುದು, ಇಸ್ಮಾಯಿಲ್ ಅವರು ರಾಜಿನಾಮೆ ನೀಡಬೇಕಾದ ಪರಿಸ್ಥಿತಿ ಎದುರಾಗುವುದು, ರಜಾಕಾರರ ಧೋರಣೆಗಳು ಮುಂತಾದ ವಿಷಯಗಳನ್ನು ನಿಬಂಧವು ಚರ್ಚಿಸುತ್ತದೆ.

**19. ಪಡೆದ ಪ್ರಶಸ್ತಿ – ಮನ್ನಣೆ**

ಪ್ರಕಟಗೊಂಡ ಕೃತಿಗಳಿಗೆ ಹಾಗೂ ಲೇಖನಗಳಿಗೆ ವಿದ್ವಾಂಸರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಪೂರೈಸಿದ ವಿಭಾಗದ ಯೋಜನೆಗಳಿಗೆ ವಿಷಯತಜ್ಞರು ಪ್ರಶಂಸೆಯನ್ನು ವ್ಯಕ್ತಪಡಿಸಿ, ಪ್ರಕಟಿಸಬಹುದೆನ್ನುವ ವರದಿಯನ್ನು ನೀಡಿದ್ದಾರೆ. ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳು, ಕಾಲೇಜುಗಳು ಹಾಗೂ ಸಂಘ–ಸಂಸ್ಥೆಗಳು ವಿಚಾರಸಂಕಿರಣ, ಕಾರ್ಯಾಗಾರ ಹಾಗೂ ಕಮ್ಮಟಗಳಿಗೆ ಆಹ್ವಾನಿಸಿ ಸನ್ಮಾನಿಸಿವೆ.

**20. ಶೈಕ್ಷಣಿಕ ಉದ್ದೇಶಕ್ಕಾಗಿ (ವಿಶ್ವವಿದ್ಯಾಲಯ ಹೊರತುಪಡಿಸಿ)**
**ನಿರ್ವಹಿಸಿದ ಯೋಜನೆಗಳು**

**01. ತುಳುನಾಡು–ಕನ್ನಡನುಡಿ (2009–10)**

ಕನ್ನಡ ಶಾಸ್ತ್ರೀಯ ಭಾಷಾ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ ಪಡೆದಿರುವ ಈ ಯೋಜನೆಯನ್ನು ವಿಶ್ವವಿದ್ಯಾಲಯದ ಮೂಲಕ ನಿರ್ವಹಿಸಲಾಗುತ್ತಿದೆ. ತುಳುನಾಡು ಕನ್ನಡ ಪ್ರದೇಶಗಳೊಂದಿಗೆ ಹಾಗೂ ತುಳು ಭಾಷೆ ಕನ್ನಡ ಭಾಷೆಯೊಂದಿಗೆ ಮುಖಾಮುಖಿಯಾಗಿರುವುದು ಹಾಗೂ ಈ ಮುಖಾಮುಖಿ ಪರಸ್ಪರರ ಬೆಳವಣಿಗೆಗೆ ಪೂರಕ ಹಾಗೂ ಮಾರಕ ಆಗಿರುವುದರ ಕುರಿತು ಈ ಯೋಜನೆಯಲ್ಲಿ ಚರ್ಚಿಸಲಾಗಿದೆ. ತುಳುನಾಡಿನ ಭಾಷಿಕ ಹಾಗೂ ಆಡಳಿತಾತ್ಮಕ ನೆಲೆಗಳು, ತುಳುನಾಡಿಗೆ ಕನ್ನಡದ ಪ್ರವೇಶ, ತುಳುನಾಡಿನ ಕನ್ನಡ ಪ್ರದೇಶಗಳು, ಕನ್ನಡ ಸಮುದಾಯಗಳು, ಪ್ರಭುತ್ವದ ಭಾಷೆಯಾಗಿ ಕನ್ನಡ, ಕನ್ನಡ ಶಾಸ್ತ್ರೀಯತೆಯಲ್ಲಿ ತುಳುವಿನ ಸ್ಥಾನ ಮುಂತಾದ ವಿಚಾರಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

**21. ನಿರ್ವಹಿಸಿದ ಇತರೆ ಕೆಲಸಗಳು**

**೧. ಆಡಳಿತಾತ್ಮಕ ಕೆಲಸಗಳು**

**೨. ಹೆಚ್ಚಿನ ಜವಾಬ್ದಾರಿಗಳು**

1. ಅಧ್ಯಯನಾಂಗದಲ್ಲಿ ಸಹಾಯಕ ನಿರ್ದೇಶಕನಾಗಿ ಕಾರ್ಯನಿರ್ವಹಣೆ–ದಿನಾಂಕ 02.12.1996ರಿಂದ 15.04.1998
2. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದ ಕರ್ನಾಟಕ ಇತಿಹಾಸ ಕಾಂಗ್ರೆಸ್‌ನ 12ನೇ ಅಧಿವೇಶನದ(25ರಿಂದ 27, ಅಕ್ಟೋಬರ್ 1996) ಸ್ಥಳೀಯ ಖಜಾಂಚಿಯಾಗಿ ಕಾರ್ಯನಿರ್ವಹಣೆ.
3. ಕನ್ನಡ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಕುಂದುಕೊರತೆ(ಪರೀಕ್ಷೆಗಳು) ಸಮಿತಿಯ ಸದಸ್ಯ ಸಂಚಾಲಕನಾಗಿ ಕಾರ್ಯ ನಿರ್ವಹಣೆ–2005
4. ಕನ್ನಡ ವಿಶ್ವವಿದ್ಯಾಲಯದ ಹಿಂದುಳಿದ ವರ್ಗಗಳ ವಿಶೇಷ ಘಟಕದ ಸದಸ್ಯನಾಗಿ ಕಾರ್ಯನಿರ್ವಹಣೆ–2005 06
5. ಚರಿತ್ರೆ ವಿಭಾಗದ ಮುಖ್ಯಸ್ಥನಾಗಿ ಕಾರ್ಯನಿರ್ವಹಣೆ– ದಿ. 07.11.2005ರಿಂದ 06.11.2007
6. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದ ಕರ್ನಾಟಕ ಇತಿಹಾಸ ಕಾಂಗ್ರೆಸ್‌ನ 18ನೇ ಅಧಿವೇಶನದ(26ರಿಂದ 28 ಅಕ್ಟೋಬರ್ 2006) ಸ್ಥಳೀಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಣೆ.
7. ಡಾ.ಶಂಬಾಜೋಶಿ ಅಧ್ಯಯನ ಪೀಠದ ಸಂಚಾಲಕನಾಗಿ ಕಾರ್ಯನಿರ್ವಹಣೆ, ದಿ. 02.07.2007ರಿಂದ 02.07.2009
8. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ಕೇಂದ್ರದ ಚರಿತ್ರೆ ಸ್ನಾತಕೋತ್ತರ ಪದವಿಯ ಅಧ್ಯಯನ ಮಂಡಳಿ ಹಾಗೂ ಪರೀಕ್ಷಾ ಮಂಡಳಿ ಸದಸ್ಯನಾಗಿ ಕಾರ್ಯನಿರ್ವಹಣೆ – 2005–2007, 2007–2009
9. ಕನ್ನಡ ವಿಶ್ವವಿದ್ಯಾಲಯ ದೂರಶಿಕ್ಷಣ ಕೇಂದ್ರದ ಚರಿತ್ರೆ ಸ್ನಾತಕೋತ್ತರ ಪದವಿಯ ಪರೀಕ್ಷಾ ಮಂಡಳಿ ಅಧ್ಯಕ್ಷನಾಗಿ ಕಾರ್ಯನಿರ್ವಹಣೆ, 2008–2009
10. ಯು.ಜಿ.ಸಿ.ಯ 11ನೇ ಪಂಚವಾರ್ಷಿಕ ಯೋಜನೆಯ ಸ್ಥಳೀಯ ಪ್ರಸ್ತಾವ ಸಿದ್ಧತಾ ಸಮಿತಿಯ ಸದಸ್ಯನಾಗಿ ಕಾರ್ಯನಿರ್ವಹಣೆ – 2007–2008
11. ನ್ಯಾಕ್ ಮರುಮೌಲ್ಯಮಾಪನ ಉಸ್ತುವಾರಿ ಸಮಿತಿಯ ಸದಸ್ಯನಾಗಿ ಕಾರ್ಯನಿರ್ವಹಣೆ – 2009–2012

12. ಐ.ಕ್ಯೂ.ಎ.ಸಿ.(ಆಂತರಿಕ ಗುಣಮಟ್ಟ ಭರವಸೆ ಘಟಕ)ಯ ವರದಿ ಸಿದ್ಧತಾ ಸಮಿತಿಯ ಸದಸ್ಯನಾಗಿ ಕಾರ್ಯನಿರ್ವಹಣೆ – 2009–2010

13. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ಕೇಂದ್ರದ ಕರ್ನಾಟಕ ಅಧ್ಯಯನ ಸರ್ಟಿಫಿಕೇಟ್ ಕೋರ್ಸ್‌ನ ಅಧ್ಯಯನ ಮಂಡಳಿ ಸದಸ್ಯನಾಗಿ ಕಾರ್ಯನಿರ್ವಹಣೆ – 2009–2010, 2012–14

14. ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯ ಸಲಹಾ ಸಮಿತಿ ಸದಸ್ಯನಾಗಿ ಕಾರ್ಯನಿರ್ವಹಣೆ – 2009–2010

15. ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಸಂಸ್ಥೆಗಳ ಎಂ.ಫಿಲ್ ಹಾಗೂ ಪಿಎಚ್.ಡಿ ಪರೀಕ್ಷೆ ಮೌಲ್ಯಮಾಪನ ಹಾಗೂ ಮಹಾಪ್ರಬಂಧಗಳ ಮೌಲ್ಯಮಾಪನ ಕಾರ್ಯನಿರ್ವಹಣೆ.

16. ಮಂಗಳೂರು ವಿಶ್ವವಿದ್ಯಾನಿಲಯದ ಚರಿತ್ರೆ ವಿಭಾಗದ ಪರೀಕ್ಷಾ ಮಂಡಳಿ ಸದಸ್ಯನಾಗಿ ಕಾರ್ಯನಿರ್ವಹಣೆ, 2006–07, 2008–09, 2010–11, 2012–13, 2013–14

17. ಬೆಂಗಳೂರು ವಿಶ್ವವಿದ್ಯಾನಿಲಯದ ಚರಿತ್ರೆ ವಿಭಾಗದ ಪರೀಕ್ಷಾ ಮಂಡಳಿ ಸದಸ್ಯನಾಗಿ ಕಾರ್ಯನಿರ್ವಹಣೆ, 2009–2010, 2012–13, 2013–14

18. ಕುವೆಂಪು ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಪ್ರಶ್ನೆ ಪತ್ರಿಕೆ ಸಿದ್ಧತೆ ಹಾಗೂ ಮೌಲ್ಯಮಾಪನ ಕಾರ್ಯನಿರ್ವಹಣೆ, 2009–2010, 2012–13, 2013–14

19. ಕೆ.ಪಿ.ಎಸ್.ಸಿ.ಯ ಗೆಜೆಟೆಡ್ ಪ್ರೊಬೇಷನರ್ಸ್ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯನಿರ್ವಹಣೆ – 2006–07, 2008–09

20. ದಾವಣಗೆರೆ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಪರೀಕ್ಷಾ ಮೌಲ್ಯಮಾಪನ ಕೆಲಸಗಳ ಕಾರ್ಯನಿರ್ವಹಣೆ,2010–11

21. ಕರ್ನಾಟಕ ಇತಿಹಾಸ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿ ಸದಸ್ಯನಾಗಿ ಕಾರ್ಯನಿರ್ವಹಣೆ – 2007–2008

22. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಚರಿತ್ರೆ ವಿಭಾಗದ ಪರೀಕ್ಷಾ ಮಂಡಳಿ ಸದಸ್ಯನಾಗಿ ಕಾರ್ಯನಿರ್ವಹಣೆ, 2013–14

23. ಯು.ಜಿ.ಸಿ.ಯ 12ನೇ ಪಂಚವಾರ್ಷಿಕ ಯೋಜನೆಯ ಪ್ರಸ್ತಾವ ಸಿದ್ಧತಾ ಸಮಿತಿಯ ಸದಸ್ಯನಾಗಿ ಕಾರ್ಯನಿರ್ವಹಣೆ, 2011–13

24. ಶಾಸನಶಾಸ್ತ್ರ ವಿಭಾಗದ ಡಾಕ್ಟರಲ್ ಸಮಿತಿ(ಪಿಎಚ್.ಡಿ. ಸಮಿತಿ)ಯ ಆಂತರಿಕ ವಿಷಯ ತಜ್ಞನಾಗಿ ಕಾರ್ಯನಿರ್ವಹಣೆ, 2012–14

25. ದೂರಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ನಿಯಮಾವಳಿಗಳು ಪರಿಷ್ಕರಣಾ ಸಮಿತಿ(ಮಾಲ್ ಪ್ರಾಕ್ಟೀಸ್ ಸಮಿತಿ)ಯ ಸದಸ್ಯನಾಗಿ ಕಾರ್ಯನಿರ್ವಹಣೆ, 2013–14

26. ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ, ಮಂಗಳೂರು: ಇಲ್ಲಿನ ಚರಿತ್ರೆ ಶೈಕ್ಷಣಿಕ ಸಲಹಾ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಣೆ, 2012–14

27. ಡಾ.ಫ.ಗು. ಹಳಕಟ್ಟಿ, ಸಂಶೋಧನ ಕೇಂದ್ರ, ಬಿಜಾಪುರ: ಇಲ್ಲಿನ ಚರಿತ್ರೆ ಶೈಕ್ಷಣಿಕ ಸಲಹಾ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಣೆ, 2012–14

28. ಸಿ.ಎ.ಎಸ್. ನಿಯಮಾವಳಿ ಪರಿಶೀಲನಾ ಸಮಿತಿಯ ಸದಸ್ಯನಾಗಿ ಕಾರ್ಯನಿರ್ವಹಣೆ, 2013–14

29.ರಾಷ್ಟ್ರೀಯ ಉಚ್ಚತರ ಶೈಕ್ಷಣಿಕ ಅಭಿಯಾನ(ರೂಸಾ) ಅನುಷ್ಠಾನ ಸಮಿತಿಯ ಸದಸ್ಯನಾಗಿ ಕಾರ್ಯನಿರ್ವಹಣೆ,2013–14

30. ಸಮಾಜವಿಜ್ಞಾನಗಳ ನಿಕಾಯದ ನಿಯತಕಾಲಿಕೆ **ಸಮಾಜ ಅಧ್ಯಯನ**ದ ಸಂಪಾದಕನಾಗಿ ಕಾರ್ಯನಿರ್ವಹಣೆ, 2014